ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ತಿರುವನಂತಪುರಂನಲ್ಲಿ ಶ್ರೀಲಂಕಾ ವಿರುದ್ಧ ನಡೆದ ಟಿ-20 ಪಂದ್ಯದಲ್ಲಿ ಅರ್ಧ ಶತಕ (43ಕ್ಕೆ 68 ರನ್) ಗಳಿಸಿದ ಭಾರತ ತಂಡದ ಹರ್ಮನ್ ಪ್ರೀತ್ ಕೌರ್... ಭಾರತ 175ಕ್ಕೆ 7

31 ಡಿಸೆಂಬರ್ 2025 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 289 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಟೀಕೆಗಳಿಗಿಲ್ಲ ಆಯುಷ್ಯ, ಕೆಲಸಕ್ಕಿದೆ ಭವಿಷ್ಯ » 2

ಪತ್ರಕರ್ತರು ನೇರ, ಸತ್ಯ ವರದಿಗೆ ಮುಂದಾಗಬೇಕು » 3

ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಿ : ಡಿ.ಸಿ. » 4

ಕೋಗಿಲು ವಿವಾದ : ಪಾಕ್, ಕೇರಳ ಕ್ಯಾತೆ

ಪಾಕಿಸ್ತಾನ ಮೂಗು ತೂರಿಸಿರುವುದಕ್ಕೆ ಭಾರೀ ಆಕ್ರೋಶ | ಕಾಂಗ್ರೆಸ್ ವಿರುದ್ಧ ಕೇಂದ್ರ ಸಚಿವರು, ಬಿಜೆಪಿ ನಾಯಕರ ಕಿಡಿ

• ಪ್ರಜೋದಯ ವರದಿ

ಬೆಂಗಳೂರು: ಯಲಹಂಕದ ಕೋಗಿಲು ಬಡಾವಣೆಯಲ್ಲಿ ಅಕ್ರಮವಾಗಿ ನಿರ್ಮಿಸಲಾಗಿದ್ದ ಮನೆಗಳನ್ನು ರಾಜ್ಯ ಸರ್ಕಾರ ನೆಲಸಮಗೊಳಿಸಿದ ವಿಚಾರ ದೇಶಾದ್ಯಂತ ಚರ್ಚೆಯಲ್ಲಿದೆ. ನೆರೆ ರಾಜ್ಯ ಕೇರಳ ಈ ವಿಚಾರವಾಗಿ ಕರ್ನಾಟಕದ ವಿರುದ್ಧ ಕೆಂಡ ಕಾರಿದೆ. ಆದರೆ, ಯಾವುದಕ್ಕೂ ಸಂಬಂಧವೇ ಇಲ್ಲದ ಪಾಕಿಸ್ತಾನವೂ ಈ ವಿಚಾರದಲ್ಲಿ ಮೂಗು ತೂರಿಸಿರುವುದು ಭಾರೀ ಆಕ್ರೋಶಕ್ಕೆ ಕಾರಣವಾಗಿದೆ.

ಪಾಕಿಸ್ತಾನದ ಆಕ್ಷೇಪವನ್ನು ಬಿಜೆಪಿ ಪ್ರಶ್ನಿಸುವುದರೊಂದಿಗೆ ಕಾಂಗ್ರೆಸ್ ಸರ್ಕಾರ ಒಡೆದು ಆಳುವ ತುಷ್ಟೀಕರಣ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದೆ. ಈ ಬಗ್ಗೆ ಕೇಂದ್ರ ಸಚಿವರಾದ ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಪ್ರಲ್ಹಾದ್ ಜೋಶಿ, ಪ್ರತಿಪಕ್ಷದ ನಾಯಕ ಆರ್. ಅಶೋಕ್ ಅವರು ಕಿಡಿ ಕಾರಿದ್ದಾರೆ.

ಅಕ್ರಮವಾಗಿ ನಿರ್ಮಿಸಲಾಗಿದ್ದ ಮುಸ್ಲಿಮರ 200 ಮನೆಗಳನ್ನು ಕರ್ನಾಟಕ ಸರ್ಕಾರ ನೆಲಸಮ ಮಾಡಿದ್ದಕ್ಕೆ ಹೇಳಿಕೆ ನೀಡಿರುವ ಪಾಕ್ ವಿದೇಶಾಂಗ ಇಲಾಖೆ, ಭಾರತದಲ್ಲಿ ಅಲ್ಪಸಂಖ್ಯಾತರ ಮೇಲಿನ ಕಿರುಕುಳ ತೀವ್ರ ಕಳವಳದ ವಿಷಯವಾಗಿದೆ. ಅಲ್ಲಿ ಕ್ರಿಸ್‌ಮಸ್ ಆಚರಣೆ ವೇಳೆ ದಾಳಿಗಳು ಆಗಿವೆ. ಸರ್ಕಾರಿ ಪ್ರಾಯೋಜಕತ್ವದಿಂದ ಮುಸ್ಲಿಮರ ಮನೆಗಳನ್ನು ಧ್ವಂಸಗೊಳಿಸಲಾಗಿದೆ ಹಾಗು ಮುಸ್ಲಿಮರ ಗುಂಪು ಹತ್ಯೆ ನಡೆದಿವೆ ಎಂದು ಆರೋಪಿಸಿದೆ.

ಕೋಗಿಲು ಬಡಾವಣೆಯ ಅನಧಿಕೃತ ಮನೆಗಳ ತೆರವು ಘಟನೆಯನ್ನು ಪಾಕಿಸ್ತಾನ ಪ್ರಸ್ತಾಪಿಸಿರುವುದಕ್ಕೆ ಬಿಜೆಪಿ ನಾಯಕರು ಕೆರಳಿದ್ದಾರೆ. ಭಾರತದೊಳಗೆ ಕಾನೂನುಬದ್ಧ ಆಡಳಿತಾತ್ಮಕ ಕ್ರಮವನ್ನು ಪಾಕಿಸ್ತಾನ ಪ್ರಶ್ನಿಸುವುದರೊಂದಿಗೆ ಈ ವಿವಾದವನ್ನು ದೇಶೀಯ ಮತ್ತು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ರಾಜಕೀಯ ಮತ್ತು ಕೋಮು ವಿಷಯವನ್ನಾಗಿ ರೂಪಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಕೇಂದ್ರ ಸಚಿವ ವಿ.ಸೋಮಣ್ಣ ಮಾತನಾಡಿ, ತಮ್ಮಲ್ಲೇ ಹುಳುಕಿಟ್ಟು

ಕೊಂಡಿರುವ ಕೇರಳ ಸರ್ಕಾರ ಮತ್ತು ಪಾಕಿಸ್ತಾನ, ಕರ್ನಾಟಕದ ವಿಚಾರದಲ್ಲಿ ಮೂಗುತೂರಿಸುತ್ತಿರುವುದು ನಾಚಿಕೆಗೇಡು. ಈ ನಡುವೆ ಕೇರಳ ಮತ್ತು ಪಾಕಿಸ್ತಾನ ಸರ್ಕಾರಗಳು ಕ್ಯಾತೆ ತೆಗೆದ ಕೂಡಲೇ ಕರ್ನಾಟಕ ಕಾಂಗ್ರೆಸ್ ಸರ್ಕಾರ ಓಲೈಕೆಗಾಗಿ ಸಮಜಾಯಿಷಿ ನೀಡುತ್ತಿರುವುದು ಅದಕ್ಕಿಂತಲೂ ವಿಪರ್ಯಾಸದ ಸಂಗತಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಒತ್ತುವರಿ ಜಾಗದಲ್ಲಿದ್ದ ಮನೆಗಳನ್ನು ತೆರವು ಮಾಡಿದ್ದೇವೆಂದು ಸ್ಪಷ್ಟನೆ ಕೊಟ್ಟ ಮೇಲೆ, ಸಂತ್ರಸ್ತರಿಗೆ ಮನೆ ನಿರ್ಮಿಸಿ ಕೊಡುತ್ತೇವೆ ಎನ್ನುವ ಭರವಸೆ ನೀಡಿರುವುದರ ಹಿಂದಿನ ಹುನ್ನಾರವೇನು. ಅಷ್ಟಕ್ಕೂ ಅಕ್ರಮ ಬಡಾವಣೆಗಳನ್ನು ನಿರ್ಮಿಸಿಕೊಂಡ

» ನಾಲ್ಕನೇ ಪುಟದಲ್ಲಿ

ಪಾಕಿಸ್ತಾನಕ್ಕೇನು ಹಕ್ಕಿದೆ: ಜಮೀರ್

ಕೋಗಿಲು ಲೇಔಟ್ ಒತ್ತುವರಿ ತೆರವಿಗೆ ಪಾಕಿಸ್ತಾನ ಆಕ್ಷೇಪ ವ್ಯಕ್ತಪಡಿಸಿರುವುದಕ್ಕೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಪ್ರತಿಕ್ರಿಯಿಸಿ, ಪಾಕಿಸ್ತಾನಕ್ಕೂ ನಮಗೂ ಏನೇನೂ ಸಂಬಂಧ ಇಲ್ಲ. ಅವರು ಯಾರು ಹೇಳುವುದಕ್ಕೆ, ಅವರಿಗೇನು ಹಕ್ಕಿದೆ ಎಂದು ಪ್ರಶ್ನಿಸಿದ್ದಾರೆ. ನಮ್ಮ ದೇಶದಲ್ಲಿ ನಾವು ಇದ್ದೇವೆ. ಮುಸ್ಲಿಮರನ್ನು ನೋಡಿಕೊಳ್ಳಲು ನಾವು ಇದ್ದೇವೆ. ಪಾಕಿಸ್ತಾನದಲ್ಲಿರುವ ಬಡತನವನ್ನು ನಿವಾರಿಸಲಿ ಎಂದು ತಿರುಗೇಟು ನೀಡಿದರು.

ಹೊಸವರ್ಷ ಆಚರಣೆಗೆ ಅಗತ್ಯ ಬಂದೋಬಸ್ತ್

ಭದ್ರತೆಗೆ 10 ವಿಶೇಷ ತುಕಡಿ ನಿಯೋಜನೆ : 300 ಹೋಂಗಾರ್ಡ್ಸ್ ಬಳಕೆ

• ಪ್ರಜೋದಯ ವರದಿ

ಹಾಸನ: ಹೊಸವರ್ಷ ಆಚರಣೆ ಹಿನ್ನಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಇಲಾಖೆ ವತಿಯಿಂದ ಅಗತ್ಯ ಬಂದೋಬಸ್ತ್ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತಾ ಅವರು ತಿಳಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯಲ್ಲಿ 200ಕ್ಕೂ ಪ್ರದೇಶಗಳಲ್ಲಿ ಬಂದೋಬಸ್ತ್‌ಗೆ ಪೊಲೀಸರನ್ನು ನಿಯೋಜಿಸಲಾಗಿದೆ. 50ಕ್ಕೂ ಹೆಚ್ಚು ಕಡೆಗಳಲ್ಲಿ ಬ್ಯಾರಿಕೇಡ್, ತಪಾಸಣಾ ಕೇಂದ್ರಗಳನ್ನು ಮಾಡಿಕೊಳ್ಳಲಾಗಿದೆ. ಗಡಿ ಭಾಗದಲ್ಲೂ ಬ್ಯಾರಿಕೇಡ್, ಚೆಕ್ ಪೋಸ್ಟ್‌ಗಳನ್ನು ನಿರ್ಮಾಣ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಹೆಚ್ಚಿರುವುದರಿಂದ ವಾಹನಗಳ ವೇಗ ಮಿತಿ, ವಿಲ್ಹೀಂಗ್ ತಪ್ಪಿಸಲು ಹೈವೇ ಪೆಟ್ರೋಲಿಂಗ್ ವ್ಯವಸ್ಥೆ ಮಾಡಲಾಗಿದೆ. ಜಿಲ್ಲೆಯ 25ಕ್ಕೂ ಹೆಚ್ಚು

ಪ್ರದೇಶಗಳಲ್ಲಿ 100ಕ್ಕೂ ಹೆಚ್ಚು ಜನರು ಸೇರುವ ಪ್ರದೇಶಗಳನ್ನು ಗುರುತಿಸಿದ್ದೇವೆ. ಅಲ್ಲಿ ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗಾಗಿ ವಿಶೇಷ ತಂಡವನ್ನು ರಚಿಸಲಾಗಿದೆ. ರೆಸಾರ್ಟ್, ಹೋಂಸ್ಟೇಗಳ ಮಾಲೀಕರೊಂದಿಗೆ ಈಗಾಗಲೇ ಪೂರ್ವಭಾವಿ ಸಭೆ ನಡೆಸಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿಸಲಾಗಿದೆ. ವಿಶೇಷ ಪಾರ್ಟಿಗಳನ್ನು ಆಯೋಜಿಸಲು ಯಾರಿಗೂ ಅನುಮತಿ ನೀಡಿಲ್ಲವೆಂದು ಸ್ಪಷ್ಟಪಡಿಸಿದರು.

ಹೋಟೆಲ್, ಲಾಡ್ಜ್‌ಗಳಲ್ಲಿ ಉಳಿದುಕೊಳ್ಳುವ ಅಥಿತಿಗಳು ಹೊರಗೆ ಬಂದು ಹೊಸ ವರ್ಷ ಆಚರಣೆ ಮಾಡುವಂತಿಲ್ಲ. ಬಂದೋಬಸ್‌ಗೆ 10 ವಿಶೇಷ ತುಕಡಿಗಳನ್ನು ನಿಯೋಜಿಸಲಾಗಿದೆ. 300 ಹೋಂಗಾರ್ಡ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲೂ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇವೆ. ಜನರು ಹೊಸ ವರ್ಷ ಆಚರಣೆ ಮಾಡುವ ಸಂದರ್ಭದಲ್ಲಿ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗಬಾರದೆಂದು ಹೇಳಿದರು.

ಜನರು ಹೊಸ ವರ್ಷವನ್ನು ಖುಷಿಯಿಂದ ಆಚರಿಸುವ ಜೊತೆಗೆ ಮಹಿಳಾ ಮತ್ತು ಮಕ್ಕಳ ಸುರಕ್ಷತೆಗೆ ಒತ್ತು ನೀಡಬೇಕು. ಮದ್ಯಸೇವನೆ ಮಾಡಿ ವಾಹನ ಚಲಾಯಿಸಬಾರದು. ಹೊಸವರ್ಷವನ್ನು ಒಳ್ಳೆಯ ರೀತಿಯಲ್ಲಿ ಪ್ರಾರಂಭಿಸಿ ಎಂದು ಕೋರಿದರು.

ಪತ್ರಕರ್ತರ ಹೆಸರಿನಲ್ಲಿ ವಸೂಲಿ ಆರೋಪ: ತನಿಖೆಗೆ ಆಗ್ರಹ

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ನೇತೃತ್ವದಲ್ಲಿ ಎಸ್‌ಪಿಗೆ ದೂರು

• ಪ್ರಜೋದಯ ವರದಿ

ಹಾಸನ: ಅಕ್ರಮ ಅಕ್ಕಿ ಸಾಗಣೆ ಲಾರಿ ವಶ ಪ್ರಕರಣದಲ್ಲಿ ಪತ್ರಕರ್ತರ ಹೆಸರಿನಲ್ಲಿ ಹಣ ವಸೂಲಿ ಮಾಡಿರುವ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರ ನೇತೃತ್ವದಲ್ಲಿ ಮಂಗಳವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರಿಗೆ ದೂರು ನೀಡಲಾಯಿತು.

ಅಕ್ರಮವಾಗಿ ಅಕ್ಕಿ ಸಾಗಣೆ ಮಾಡುತ್ತಿದ್ದ ಲಾರಿಯನ್ನು ಆಲೂರು ಪೊಲೀಸರು ವಶಕ್ಕೆ ಪಡೆದಿರುವುದು ಸರಿಯಷ್ಟೇ. ಆದರೆ, ಅಕ್ಕಿ ಸಾಗಿಸುತ್ತಿದ್ದ ಲಾರಿಯವರಿಂದ ಪತ್ರಕರ್ತರ ಹೆಸರಿನಲ್ಲಿ ಹಣ ವಸೂಲಿ ಮಾಡಿದ್ದಾರೆಂಬ ವಿಚಾರ ನಮ್ಮ ಸಂಘದಲ್ಲಿ ಹೆಚ್ಚು ಚರ್ಚೆಯಾಗುತ್ತಿದೆ. ಈ ಬೆಳವಣಿಗೆಯಿಂದ ಜಿಲ್ಲೆಯ ಪತ್ರಕರ್ತರ ಕುರಿತು ಸಾರ್ವಜನಿಕ ವಲಯದಲ್ಲಿ ಅನುಮಾನ ಮೂಡುವಂತಹ ಪರಿಸ್ಥಿತಿ ಎದುರಾಗಿದ್ದು, ಪತ್ರಕರ್ತರು ಕಳಂಕ ಹೊತ್ತುಕೊಳ್ಳುವಂತಾಗಿದೆ ಎಂದು ತಿಳಿಸಿದರು.

ಪತ್ರಕರ್ತರು ಈ ವಿಚಾರದಲ್ಲಿ ಮುಜುಗರಕ್ಕೆ ಒಳಗಾಗುವ ಪರಿಸ್ಥಿತಿ ಇರುವುದರಿಂದ ದಯಾಮಾಡಿ ಈ ಪ್ರಕರಣದ ಸಂಬಂಧ ಸಮಗ್ರ ತನಿಖೆ ನಡೆಸಿ, ಅಕ್ರಮದಲ್ಲಿ ಭಾಗಿಯಾಗಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು. ತನಿಖೆಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಸಂಘದ ಅಧ್ಯಕ್ಷರು ತಿಳಿಸಿದರು.

ದೂರು ಸ್ವೀಕರಿಸಿ ಮಾತನಾಡಿದ ಪೊಲೀಸ್ ವರಿಷ್ಠಾಧಿಕಾರಿ ಸುಜೀತಾ ಅವರು, ಈ ಸಂಬಂಧ ಹೊಸದಾಗಿ ಎಫ್‌ಐಆರ್ ದಾಖಲು ಮಾಡಬೇಕು. ಪತ್ರಕರ್ತರ ಬಗ್ಗೆ ಕೇಳಿ ಬಂದಿರುವ ಆರೋಪ ಸಂಬಂಧ ತನಿಖೆ ನಡೆಸಿ ಎಂದು ಲಿಖಿತ ದೂರು ನೀಡಿರುವುದು ಇದೇ ಮೊದಲು ಮತ್ತು ಒಳ್ಳೆಯ ಬೆಳವಣಿಗೆ. ಇದರಿಂದ ಸುಳ್ಳು ಪ್ರಚಾರ ಮಾಡುವುದು, ಯಾರೋ ಒಬ್ಬರನ್ನು ಗುರಿಯಾಗಿಸಿ ವರದಿ ಮಾಡುವುದು ತಪ್ಪಲಿದೆ. ಈ ವಿಚಾರದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಸುವ ಭರವಸೆ ನೀಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಕಾರ್ಯದರ್ಶಿಗಳಾದ ಕೆ.ಎಂ.ಹರೀಶ್, ಕುಶ್ವಂತ್, ಖಜಾಂಚಿ ಪ್ರಕಾಶ್ ಟಿವಿ-5, ಕಾರ್ಯಕಾರಿ ಸಮಿತಿ ಸದಸ್ಯರಾದ ನಟರಾಜ್, ಶರಣ್ ಬಾಳ್ಳು ಗೋಪಾಲ್, ಕೃಷ್ಣ ಇಬ್ಬೀಡು, ಹೆಚ್. ಆರ್.ಶರತ್, ಕೆ.ಎಂ.ಮೋಹನ್, ಸಚಿನ್ ಇದ್ದರು.

ವೈಯಕ್ತಿಕ ದ್ವೇಷ : ಗುಂಪುಗಳ ಹೊಡೆದಾಟ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ವೈಯಕ್ತಿಕ ದ್ವೇಷದಿಂದ ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆದು ದೂರು-ಪ್ರತಿದೂರು ದಾಖಲಾಗಿದೆ.

ಪಟ್ಟಣದ ಜ್ಞಾನ ಸಾಗರ ಅಂತರ್ರಾಷ್ಟ್ರೀಯ ಶಾಲೆ ಸಮೀಪ ಡಿ. 28ರ ರಾತ್ರಿ ಘಟನೆ ನಡೆದಿದ್ದು ಎರಡೂ ಕಡೆಯವರು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ನಾಗಸಮುದ್ರ ರಸ್ತೆಯ ವಿಕಾಸ್, ಅಕುಲ್ ಎಂಬುವವರ ಮೇಲೆ ವಿನೋದ್, ಶ್ರೇಯಸ್ ಹಾಗು ಗಗನ್ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಶಾಲೆಯಲ್ಲಿ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಿಸಲು ವಿಕಾಸ್ ಹಾಗು ಅಕುಲ್ ತೆರಳಿದ್ದರು. ರಾತ್ರಿ 9.30ರ ಸಮಯದಲ್ಲಿ ಅಲ್ಲಿಗೆ ಬಂದ ವಿನೋದ್ ಹಾಗು ಇತರರು, ನಿಮ್ಮ ಅಣ್ಣನ ಕೊಲೆ ಕೇಸ್‌ನಲ್ಲಿ ಸಾಕ್ಷಿ ಆಗಿದ್ದಿಯಲ್ಲವೇ, ನಿನ್ನನ್ನೇ ಹುಡುಕಿಕೊಂಡು ಬಂದಿದ್ದೇವೆ ಬಾ ಎಂದು ವಿಕಾಸ್‌ನನ್ನು ವಿನೋದ್ ಎಳೆದಿದ್ದಾನೆ. ಹತ್ತಿರದಲ್ಲೇ ಇದ್ದ ಶ್ರೇಯಸ್ ವಿಕಾವಿಕಿ ಕೋಲಿನಿಂದ ಹೊಡೆದಿದ್ದು, ವಿನೋದ್ ಜೇಬಿನಿಂದ ಚಾಕು ತೆಗೆದು ಬೆನ್ನಿಗೆ ಇರಿದಿದ್ದಾನೆ.

ಟ್ರಾಫಿಕ್ ಸಮಸ್ಯೆ ನಿವಾರಣೆಗೆ ಅನಧಿಕೃತ ಅಂಗಡಿ ತೆರವು

ಸುಗಮ ಸಂಚಾರ ದೃಷ್ಟಿಯಿಂದ ಕಾರ್ಯಾಚರಣೆ : ಸಿಮೆಂಟ್ ಮಂಜು

• ಪ್ರಜೋದಯ ವರದಿ

ಸಕಲೇಶಪುರ: ಪಟ್ಟಣದ ಸೌಂದರ್ಯ ವೃದ್ಧಿ, ಸಾರ್ವಜನಿಕರ ಸುರಕ್ಷತೆ, ಪಾದಚಾರಿಗಳ ಸುಗಮ ಸಂಚಾರದ ಹಿತದೃಷ್ಟಿಯಿಂದ ಪಟ್ಟಣದ ಫುಟ್‌ಪಾತ್ ಮೇಲಿನ ಅನಧಿಕೃತ ಅಂಗಡಿಗಳ ತೆರವು ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಮಂಗಳವಾರ ಶಾಸಕರ ಗೃಹ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸಕಲೇಶಪುರ, ಆಲೂರು ಹಾಗು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗಿವೆ. ಕಳೆದ ಒಂದು ವರ್ಷದಲ್ಲಿ ಸುಮಾರು 34 ಮಂದಿ ಅಪಘಾತಗಳಲ್ಲಿ ಮೃತಪಟ್ಟಿರುವುದಾಗಿ ಪೊಲೀಸ್ ಅಂಕಿ-ಅಂಶಗಳು ತಿಳಿಸುತ್ತವೆ. ಈ ಹಿನ್ನಲೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ, ಪುರಸಭೆ ಮೂಲಕ ಫುಟ್‌ಪಾತ್ ತೆರವು ಕ್ರಮ ಕೈಗೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದರು.

ಫುಟ್‌ಪಾತ್ ತೆರವು ಕಾರ್ಯಾಚರಣೆಯು ಬಡವರ ವಿರುದ್ಧದ ಕ್ರಮವಲ್ಲ. ಸಾರ್ವಜನಿಕ ಹಿತಾಸಕ್ತಿ ಮತ್ತು ಕಾನೂನು ಅನಿವಾರ್ಯತೆ ಹಿನ್ನಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪಾದಚಾರಿಗಳ ಸುರಕ್ಷತೆ ಹಾಗೂ ಅಪಘಾತಗಳ ತಡೆಗಟ್ಟುವಿಕೆಯೇ ಇದರ ಮುಖ್ಯ ಉದ್ದೇಶ ಎಂದು ಹೇಳಿದರು.

ಬೀದಿ ಬದಿ ವ್ಯಾಪಾರಿಗಳ ಜೀವನೋಪಾಯಕ್ಕೆ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಸಕಲೇಶಪುರ ಹಳೆ ಬಸ್ ನಿಲ್ದಾಣ ಸೇರಿ ನಗರದ ವಿವಿಧ ಭಾಗಗಳಲ್ಲಿ ಫುಡ್ ಕೋರ್ಟ್, ಫ್ರೂಟ್ ಕೋರ್ಟ್ ಹಾಗು ಫ್ಲವರ್ ಕೋರ್ಟ್ ಸ್ಥಾಪಿಸುವ ಯೋಜನೆ ರೂಪಿಸಲಾಗಿದೆ. ಅಗತ್ಯ ಅನುದಾನ ಮೀಸಲಿಟ್ಟು ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗುತ್ತಿದ್ದು, ಅನುಮೋದನೆ ದೊರಕಿದ ಬಳಿಕ ಕಾಮಗಾರಿ ಆರಂಭಿಸಲಾಗುವುದು ಎಂದರು.

ಹಿಂದಿನಿಂದಲೂ ಲೈಸೆನ್ಸ್ ಹೊಂದಿದ್ದು, ನೈಜವಾಗಿ ವ್ಯಾಪಾರ ನಡೆಸುತ್ತಿದ್ದವರಿಗೆ ಪ್ರಥಮ ಆದ್ಯತೆ ನೀಡಲಾಗುವುದು. ಪುರಸಭೆ ಈಗಾಗಲೇ ವ್ಯಾಪಾರಿಗಳ ವಿವರಗಳನ್ನು ಸಂಗ್ರಹಿಸಿದ್ದು, ಮಳಿಗೆಗಳು ಸಿದ್ಧವಾದ ತಕ್ಷಣ ಆದ್ಯತೆಯ ಮೇರೆಗೆ ಹಸ್ತಾಂತರಿಸಲಾಗುವುದೆಂದು ಭರವಸೆ ನೀಡಿದರು.

ತಾತ್ಕಾಲಿಕವಾಗಿ ತೆರವುಗೊಂಡ ವ್ಯಾಪಾರಿಗಳು ಹಳೆ ತಾಲ್ಲೂಕು ಕಚೇರಿ ಸಭಾಂಗಣದ ಆವರಣದಲ್ಲಿ ವ್ಯಾಪಾರ ನಡೆಸಬಹುದಾಗಿದೆ. ನಗರದ ಕಿರಿದಾದ ರಸ್ತೆಗಳು ಹಾಗು ಹೆಚ್ಚುತ್ತಿರುವ ವಾಹನ ದಟ್ಟಣೆಯಿಂದ ಉಂಟಾಗಿರುವ ಸಮಸ್ಯೆ ನಿವಾರಣೆಗೆ ಎನ್‌ಹೆಚ್ ಐ ಮೂಲಕ ರಸ್ತೆ ತೆರೆಯುವ ಕಾರ್ಯ ಪ್ರಗತಿಯಲ್ಲಿದೆ. ಸಾರ್ವಜನಿಕ ಸುರಕ್ಷತೆ, ವ್ಯಾಪಾರಸ್ಥರ ಹಿತ ಹಾಗು ನಗರ ಸಂಚಾರ ವ್ಯವಸ್ಥೆ ಸಮತೋಲನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಒಂದೂವರೆ ತಿಂಗಳೊಳಗೆ ವ್ಯವಸ್ಥಿತ ಮಳಿಗೆಗಳ ನಿರ್ಮಾಣ ಆರಂಭಿಸಿ, ವ್ಯಾಪಾರಿಗಳನ್ನು ಶಾಶ್ವತವಾಗಿ ಸ್ಥಳಾಂತರಿಸುವ ಗುರಿ ಹೊಂದಲಾಗಿದೆ. ಈ ಸಂದರ್ಭದಲ್ಲಿ ಬೀದಿ ಬದಿ ವ್ಯಾಪಾರಿಗಳು ಪುರಸಭೆ ಸೂಚಿಸುವ ತಾತ್ಕಾಲಿಕ ವ್ಯವಸ್ಥೆಗೆ ಸಹಕರಿಸಬೇಕೆಂದು ಮನವಿ ಮಾಡಿದರು.

ಆಸ್ಪತ್ರೆ ಆವರಣದಲ್ಲಿ ಕುಟುಂಬಸ್ಥರ ಮಾರಾಮಾರಿ

• ಪ್ರಜೋದಯ ವರದಿ

ಹಾಸನ: ತಾಯಿಗೆ ಚಿಕಿತ್ಸೆ ಕೊಡಿಸುವ ವಿಚಾರದಲ್ಲಿ ಅಕ್ಕ ಮತ್ತು ತಮ್ಮನ ಕುಟುಂಬಗಳ ನಡುವೆ ಮಾರಾಮಾರಿ ನಡೆದ ಘಟನೆ ನಗರದ ಆರ್.ಸಿ. ರಸ್ತೆಯ ಖಾಸಗಿ ಆಸ್ಪತ್ರೆಯ ಮುಂಭಾಗ ಸೋಮವಾರ ರಾತ್ರಿ ನಡೆದಿದೆ.

ದುದ್ದ ಸಮೀಪದ ಹಳೆಕೊಪ್ಪಲು ಗ್ರಾಮದ ಕುಟುಂಬವೊಂದರಲ್ಲಿ ಈ ಸಂಘರ್ಷ ನಡೆದಿದೆ. ಅನಾರೋಗ್ಯದಿಂದ

ಕಿವಿ ಹಣ್ಣಿನ ಆರೋಗ್ಯಕರ ಗುಣಗಳು

ಕಿವಿ ಒಂದು ವಿದೇಶಿ ಮೂಲದ ಹಣ್ಣು. ಇದರ ಹೊರ ನೋಟ ನೋಡಲು ನಮ್ಮೂರಿನ ಸಪೋಟ ಅಥವಾ ಚಿಕ್ಕು ಹಣ್ಣಿನ ತರಹವೇ ಇದ್ದರೂ ಒಳಮೈ ಸಂಪೂರ್ಣ ಭಿನ್ನ ಗಾಢ ಹಸಿರು ಬಣ್ಣದಲ್ಲಿ ಪುಟ್ಟ ಪುಟ್ಟ ಕಪ್ಪು ಬೀಜಗಳು. ಕೊರೊನಾ ಹಾಗೂ ಡೆಂಗ್ಯೂ ಜ್ವರ ಹರಡಿರುವ ಸಮಯದಲ್ಲಿ ಈ ಹಣ್ಣಿಗೆ ಬಹಳ ಬೇಡಿಕೆ. ಈ ಹಣ್ಣಿನ ಸೇವನೆಯಿಂದ ರಕ್ತದಲ್ಲಿ ಪ್ಲೇಟ್ ಲೆಟ್‌ಗಳ ಸಂಖ್ಯೆ ಅಧಿಕವಾಗುತ್ತದೆ. ಸರಿಯಾಗಿ ಮಾಗದೇ ಇದ್ದಲ್ಲಿ ಹುಳಿ ರುಚಿಯಿರುವ ಹಣ್ಣು ಚೆನ್ನಾಗಿ ಹಣ್ಣಾದರೆ ಬಹಳ ಸಿಹಿ. ಗೋಲ್ಡ್ ಕಿವಿ ಎನ್ನುವ ಒಂದು ವಿಧ ತುಂಬಾ ಸಿಹಿಯಾಗಿರುತ್ತದೆ. ಇದರ ಆರೋಗ್ಯಕರವಾದ ಗುಣಗಳನ್ನು ಗಮನಿಸುವ ಮಲಬದ್ಧತೆಯನ್ನು ನಿವಾರಿಸಲು ಕಿವಿ ಹಣ್ಣು ಒಂದು ಉತ್ತಮ ಹಣ್ಣು ಎಂದು ಅಧ್ಯಯನಗಳು ಹೇಳುತ್ತವೆ. ಹೆಚ್ಚಿನ ಫೈಬರ್ ಅಂಶವಿರುವ ಕಿವಿ ಹಣ್ಣು ವಿವಿಧ ಜೀರ್ಣಕಾರಿ ಸಮಸ್ಯೆಗಳನ್ನು ತಡೆಯಲು ಸಹಾಯ ಮಾಡುತ್ತದೆ. ದೀರ್ಘಕಾಲದ ಮಲಬದ್ಧತೆ 10 ಜನರಲ್ಲಿ ಒಬ್ಬರ ಮೇಲೆ ಪರಿಣಾಮ ಬೀರುತ್ತದೆ ಮತ್ತು ಇದು ವ್ಯಕ್ತಿಯ ಜೀವನದ ಗುಣಮಟ್ಟದ ಮೇಲೆ ಗಂಭೀರವಾಗಿ ಪರಿಣಾಮ ಬೀರಬಹುದು ಎಂದು ಸಂಶೋಧಕರೊಬ್ಬರು ಹೇಳುತ್ತಾರೆ.

ಕಿವಿ ಹಣ್ಣು ಕರುಳಿನಲ್ಲಿ ನೀರಿನಂಶವನ್ನು ಹೆಚ್ಚಿಸುತ್ತದೆ. ಇದು ಮಲವನ್ನು ಮೃದುಗೊಳಿಸುತ್ತದೆ. ಆ ಕಿವಿ ಹಣ್ಣಿನಲ್ಲಿರುವ ಫೈಬರ್ ಅಂಶ, ಪ್ರೋಟೀನ್‌ಗಳನ್ನು ಒಡೆಯುವ ಆಕ್ಟಿನಿಡಿನ್ ಕಿಣ್ವ ಮತ್ತು ಹೆಚ್ಚಿನ ನೀರಿನಂಶ ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ. ಇದು ಮಲವಿಸರ್ಜನೆಯನ್ನು ನಿಯಂತ್ರಿಸಲು, ಮಲಬದ್ಧತೆಯನ್ನು ನಿವಾರಿಸಲು, ಹೊಟ್ಟೆ ಉಬ್ಬರ ಮತ್ತು ಇತರ ಜೀರ್ಣಕಾರಿ ಅಸ್ವಸ್ಥತೆಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಇದನ್ನು ತಿನ್ನುವುದರಿಂದ ಪೋಷಕಾಂಶಗಳ ಹೀರಿಕೊಳ್ಳುವಿಕೆಯನ್ನು ಸುಧಾರಿಸಬಹುದು. ಕಿವಿ ಹಣ್ಣು ತಿನ್ನುವುದು ಹೊಟ್ಟೆ ನೋವು ಮತ್ತು ಇತರ ಅಸ್ವಸ್ಥತೆಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಇದು – ಇರುವವರಿಗೆ ವಿಶೇಷವಾಗಿ ಪ್ರಯೋಜನಕಾರಿಯಾಗಿದೆ. ಕಿವಿ ಹಣ್ಣು ಫೈಬರ್ ಮತ್ತು ಆ್ಯಂಟಿಆಕ್ಸಿಡೆಂಟ್‌ಗಳು ಆರೋಗ್ಯಕರ ಮತ್ತು ಹೆಚ್ಚು ಸಮತೋಲಿತ ಕರುಳಿನ ಮೈಕ್ರೋಬಯೋಮ್‌ಗೆ ಕಾರಣವಾಗುತ್ತವೆ. ಕಿವಿ ಹಣ್ಣಿನಲ್ಲಿ ಬಿಳಿ ರಕ್ತ ಕಣಗಳ ಉತ್ಪಾದನೆಯನ್ನು ಉತ್ತೇಜಿಸುವ ವಿಟಮಿನ್ ಸಿ, ಕರುಳಿನ ಆರೋಗ್ಯಕ್ಕೆ ಸಹಾಯ ಮಾಡುವ ವಿಟಮಿನ್ ಇ, ಆ್ಯಂಟಿಆಕ್ಸಿಡೆಂಟ್‌ಗಳು ಮತ್ತು ಫೈಬರ್‌ನಂತಹ ರೋಗನಿರೋಧಕ ಶಕ್ತಿಯನ್ನು ಬೆಂಬಲಿಸುವ ಇತರ ಪೋಷಕಾಂಶಗಳಿವೆ.

ಕಿವಿಯನ್ನು ನಿಯಮಿತವಾಗಿ ತಿನ್ನುವುದು ಜೀವಕೋಶಗಳನ್ನು ಆಕ್ಸಿಡೇಟಿವ್ = ಒತ್ತಡದಿಂದ ರಕ್ಷಿಸಲು ಮತ್ತು ಒಟ್ಟಾರೆ ರೋಗನಿರೋಧಕ ಶಕ್ತಿಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ. ಕಿವಿ ಹಣ್ಣು ವಿಟಮಿನ್ ಸಿ ಯ ಅತ್ಯುತ್ತಮ ಮೂಲವಾಗಿದೆ. ಇದು ಸೋಂಕುಗಳ ವಿರುದ್ಧ ಹೋರಾಡಲು ಅಗತ್ಯವಾದ ಬಿಳಿ ರಕ್ತ ಕಣಗಳ ಉತ್ಪಾದನೆಯನ್ನು ಉತ್ತೇಜಿಸುವ ಪ್ರಬಲ ಆ್ಯಂಟಿಆಕ್ಸಿಡೆಂಟ್ ಆಗಿದೆ. ಕಿವಿಯಲ್ಲಿರುವ ಹೆಚ್ಚಿನ ವಿಟಮಿನ್ ಸಿ – ಅಂಶವು ನ್ಯೂಟ್ರೋಫಿಲ್‌ಗಳು ಸೇರಿದಂತೆ ಜೀವಕೋಶಗಳನ್ನು ಹಾನಿಯಿಂದ ರಕ್ಷಿಸಲು ಮತ್ತು ರೋಗನಿರೋಧಕ ಪ್ರತಿಕ್ರಿಯೆಗಳಲ್ಲಿ ಅವುಗಳ ಸರಿಯಾದ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ.

ಟೀಕೆಗಳಿಗಿಲ್ಲ ಆಯುಷ್ಯ, ಕೆಲಸಕ್ಕಿದೆ ಭವಿಷ್ಯ

■ **ರಾಷ್ಟ್ರಕವಿ ಕುವೆಂಪು ಅವರು ಹೇಳುವಂತೆ, ಮನುಷ್ಯನ ಅಸ್ತಿತ್ವವಿರುವುದು ಅವನ ಮಾತಿನಲ್ಲಿ ಅಲ್ಲ, ಬದಲಾಗಿ ಅವನ ಕೃತಿಯಲ್ಲಿ. ನಾವು ಎದುರಿಸುವ ಟೀಕೆಗಳು ಗಾಳಿಯಲ್ಲಿ ಹಾರಿ ಹೋಗುವ ಧೂಳಿನಂತೆ; ಅವು ಕಣ್ಣಿಗೆ ಸ್ವಲ್ಪ ಕಾಲ ಕಿರಿಕಿರಿ ಉಂಟುಮಾಡಬಹುದು, ಆದರೆ ಅವುಗಳಿಗೆ ಸ್ವತಂತ್ರ ಅಸ್ತಿತ್ವವಿಲ್ಲ. ಆದರೆ ನಾವು ಮಾಡುವ ಸೃಜನಾತ್ಮಕ ಕೆಲಸಗಳು ಭೂಮಿಯಲ್ಲಿ ಆಳವಾಗಿ ಬೇರೂರುವ ಮರಗಳಂತೆ**

ಮಾನವ ಇತಿಹಾಸದ ಸುದೀರ್ಘ ಪಯಣವನ್ನು ಅವಲೋಕಿಸಿದರೆ ನಮಗೆ ಎರಡು ರೀತಿಯ ಧ್ವನಿಗಳು ಕೇಳಿಬರುತ್ತವೆ. ಒಂದು ಬಾಯಿ ಮಾತಿನ ಅಬ್ಬರ, ಇನ್ನೊಂದು ಕೈಗಳು ಮಾಡುವ ಕೆಲಸದ ಮೌನ. ಜಗತ್ತು ಯಾವಾಗಲೂ ಅಬ್ಬರಿಸುವವರನ್ನು ಅಥವಾ ಮಾತನಾಡುವವರನ್ನು ತಾತ್ಕಾಲಿಕವಾಗಿ ಗಮನಿಸಬಹುದು; ಆದರೆ ನಿಶ್ಶಬ್ದವಾಗಿ ಕೆಲಸ ಮಾಡುವವರನ್ನು ಮಾತ್ರ ಶಾಶ್ವತವಾಗಿ ನೆನಪಿಡುತ್ತದೆ.

ರಾಷ್ಟ್ರಕವಿ ಕುವೆಂಪು ಅವರು ಹೇಳುವಂತೆ, ಮನುಷ್ಯನ ಅಸ್ತಿತ್ವವಿರುವುದು ಅವನ ಮಾತಿನಲ್ಲಿ ಅಲ್ಲ, ಬದಲಾಗಿ ಅವನ ಕೃತಿಯಲ್ಲಿ. ನಾವು ಎದುರಿಸುವ ಟೀಕೆಗಳು ಗಾಳಿಯಲ್ಲಿ ಹಾರಿ ಹೋಗುವ ಧೂಳಿನಂತೆ; ಅವು ಕಣ್ಣಿಗೆ ಸ್ವಲ್ಪ ಕಾಲ ಕಿರಿಕಿರಿ ಉಂಟುಮಾಡಬಹುದು, ಆದರೆ ಅವುಗಳಿಗೆ ಸ್ವತಂತ್ರ ಅಸ್ತಿತ್ವವಿಲ್ಲ. ಆದರೆ ನಾವು ಮಾಡುವ ಸೃಜನಾತ್ಮಕ ಕೆಲಸಗಳು ಭೂಮಿಯಲ್ಲಿ ಆಳವಾಗಿ ಬೇರೂರುವ ಮರಗಳಂತೆ.

ಮರವು ಬೆಳೆಯುವಾಗ ಸದ್ದಿಲ್ಲದೆ ಬೆಳೆಯುತ್ತದೆ, ಆದರೆ ಅದು ನೀಡುವ ನೆರಳು ಮತ್ತು ಹಣ್ಣುಗಳು ತಲೆಮಾರುಗಳ ಕಾಲ ಉಳಿಯುತ್ತವೆ. ಈ ಸೃಜನಶೀಲ ಬದುಕಿನ ಮಂತ್ರವು ಇಂದಿನ ಗೊಂದಲಮಯ ಜಗತ್ತಿಗೆ ಅತ್ಯಂತ ಅವಶ್ಯಕವಾಗಿದೆ.

ಟೀಕೆಗಳ ಸ್ವರೂಪ: ಒಂದು ಕ್ಷಣಿಕ ನೆರಳು ಯಾವುದೇ ಹೊಸ ಹಾದಿಯಲ್ಲಿ ನಡೆಯಲು ಮೊದಲು ಮಾಡಿದಾಗ ಕಾಲಿಗೆ ಕಲ್ಲುಗಳು ತಗುಲುವುದು ಸಹಜ. ಅದೇ ರೀತಿ, ಸಮಾಜದಲ್ಲಿ ಹೊಸದನ್ನು ಸಾಧಿಸಲು ಹೊರಟಾಗ ಟೀಕೆಗಳು ಎದುರಾಗುವುದು ಅನಿವಾರ್ಯ. ಟೀಕೆ ಎಂಬುದು ಹೆಚ್ಚಾಗಿ ಅಸೂಯೆ ಅಥವಾ ಅಜ್ಞಾನದ ಮಗು. ಒಬ್ಬ ವ್ಯಕ್ತಿ ಸಾಮಾನ್ಯರಿಗಿಂತ ಭಿನ್ನವಾಗಿ ಯೋಚಿಸುತ್ತಿದ್ದಾನೆ ಅಥವಾ ಎತ್ತರಕ್ಕೆ ಬೆಳೆಯುತ್ತಿದ್ದಾನೆ ಎಂದರೆ, ಅವನನ್ನು ಕೆಳಕ್ಕೆ ಎಳೆಯಲು ಸಮಾಜ ಬಳಸುವ ಮೊದಲ ಆಯುಧವೇ ಟೀಕೆ.

ಇಂದಿನ ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಈ ಮಾತು ಇನ್ನೂ ಹೆಚ್ಚು ಪ್ರಸ್ತುತವಾಗಿದೆ. ಇಂದು ಒಂದು ಸಣ್ಣ ವಿಷಯಕ್ಕೂ ಸಾವಿರಾರು ಟೀಕೆಗಳು, ವಿಮರ್ಶೆಗಳು ವ್ಯಕ್ತವಾಗುತ್ತವೆ. ಸ್ಮಾರ್ಟ್‌ಫೋನ್ ಹಿಡಿದ ಪ್ರತಿಯೊಬ್ಬನೂ ವಿಮರ್ಶಕನಾಗಿ ಬದಲಾಗಿರುವ ಈ ಕಾಲದಲ್ಲಿ, ಸೃಜನಶೀಲ ವ್ಯಕ್ತಿಗೆ ಧೃತಿಗೆಡಲು ನೂರಾರು ಕಾರಣಗಳು ಸಿಗುತ್ತವೆ.

ಆದರೆ ಗಮನಿಸಬೇಕಾದ ಅಂಶವೆಂದರೆ ಆ ಟೀಕೆಗಳ ಆಯಸ್ಸು ಎಷ್ಟು? ಇಂದು ವೈರಲ್ ಆದ ಟೀಕೆ ನಾಳೆ ಮರೆಯಾಗುತ್ತದೆ. ಮುಂದಿನ ಹೊಸ ವಿಷಯ ಬಂದಾಗ ಹಳೆಯ ಟೀಕೆಗಳು ಸತ್ತು ಹೋಗುತ್ತವೆ. ಟೀಕೆಗಳಿಗೆ ತಾವೇ ನಿಲ್ಲುವ ಶಕ್ತಿಯಿಲ್ಲ; ಅವು ಕೇವಲ ಇತರರ ಕ್ರಿಯೆಗೆ ನೀಡುವ ಪ್ರತಿಕ್ರಿಯೆಗಳು ಮಾತ್ರ. ಸಾಧಕರ ಬದುಕಿನ ಪುಟಗಳನ್ನು ತೆರೆದಾಗ ಕುವೆಂಪು ಅವರ ಈ ಮಾತುಗಳು ಎಷ್ಟು ಸತ್ಯ ಎಂಬುದು ನಮಗೆ ನಿಚ್ಚಳವಾಗಿ ತಿಳಿಯುತ್ತದೆ. ಇತಿಹಾಸದ ಪ್ರತಿ ಪ್ರಮುಖ ಮೈಲಿಗಲ್ಲಿನ ಹಿಂದೆ ಟೀಕೆಗಳನ್ನು ಮೆಟ್ಟಿನಿಂತ ಮೌನ ಶ್ರಮವಿದೆ.

ಸರ್ ಎಂ. ವಿಶ್ವೇಶ್ವರಯ್ಯ ಅವರು ಕೃಷ್ಣರಾಜ ಸಾಗರ ಅಣೆಕಟ್ಟು ಕಟ್ಟುವ ಯೋಜನೆಯನ್ನು ಕೈಗೆತ್ತಿಕೊಂಡಾಗ ಅಂದಿನ ಬ್ರಿಟಿಷ್ ಅಧಿಕಾರಿಗಳು ಮತ್ತು ಕೆಲವು ಸ್ಥಳೀಯರು ತಾಂತ್ರಿಕವಾಗಿ ಇದು ಅಸಾಧ್ಯವೆಂದು ಟೀಕಿಸಿದರು. ಆದರೆ ವಿಶ್ವೇಶ್ವರಯ್ಯನವರು ಆ ಟೀಕೆಗಳಿಗೆ ಪತ್ರಿಕಾ ಹೇಳಿಕೆಗಳ ಮೂಲಕ ಉತ್ತರಿಸಲಿಲ್ಲ; ಬದಲಾಗಿ ಎಂಜಿನಿಯರಿಂಗ್ ನಕ್ಷೆಗಳ ಮೂಲಕ ಉತ್ತರಿಸಿದರು.

ಇಂದು ಟೀಕಾಕಾರರು ಅನಾಮಧೇಯರಾಗಿದ್ದಾರೆ, ಆದರೆ ಕೆ.ಆರ್.ಎಸ್ ಅಣೆಕಟ್ಟು ಲಕ್ಷಾಂತರ ರೈತರ ಬದುಕಿಗೆ ಜೀವನಾಡಿಯಾಗಿ ಉಳಿದಿದೆ. ಆಧುನಿಕ ಭಾರತದ ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಅವರು ಹೆಣ್ಣುಮಕ್ಕಳಿಗೆ ಅಕ್ಷರ ಕಲಿಸಲು ಹೊರಟಾಗ ಸಮಾಜ ಅವರ ಮೇಲೆ ಸಗಣಿ ಮತ್ತು ಕಲ್ಲುಗಳನ್ನು ಎಸೆದಿತ್ತು.

ಹಾಗಂತ ಅವರು ಹತಾಶರಾಗಿ ಕೆಲಸ ನಿಲ್ಲಿಸಲಿಲ್ಲ. ಬದಲಾಗಿ, ತಮ್ಮ ಬ್ಯಾಗಲ್ಲಿ ಒಂದು ಹೆಚ್ಚುವರಿ ಸೀರೆಯನ್ನು ಇಟ್ಟುಕೊಂಡು ಹೋಗುತ್ತಿದ್ದರು. ಇಂದು ಭಾರತದ ಪ್ರತಿಯೊಬ್ಬ ವಿದ್ಯಾವಂತ ಮಹಿಳೆಯೂ ಅವರ ಆ ಮೌನ ಕೆಲಸದ ಫಲವೇ ಆಗಿದ್ದಾರೆ.

ಸಾಲುಮರದ ತಿಮ್ಮಕ್ಕ ಅವರು ಮರಗಳನ್ನು ನೆಡುವಾಗ ಇವರಿಗೆ ಹುಚ್ಚು ಹಿಡಿದಿದೆ ಎಂದು ಕರೆದವರೇ ಹೆಚ್ಚು, ಬಡತನ ಮತ್ತು ಹೀಯಾಳಿಕೆಗಳ ನಡುವೆಯೂ ಅವರು ತಮ್ಮ ಕಾಯಕ ಮುಂದುವರಿಸಿದರು. ಇಂದು ಆ ಮರಗಳು ಹೆದ್ದಾರಿಯ ಉದ್ದಕ್ಕೂ ಉಸಿರಾಡುತ್ತಿವೆ, ತಿಮ್ಮಕ್ಕನವರ ಹೆಸರು ವಿಶ್ವಮಟ್ಟದಲ್ಲಿ ರಾರಾಜಿಸುತ್ತಿದೆ.

ಟೀಕೆಗಳನ್ನು ಮೆಟ್ಟಿಲನ್ನಾಗಿಸಿಕೊಳ್ಳುವುದು ಯಶಸ್ಸಿನ ಹಾದಿಯಲ್ಲಿ ಟೀಕೆ ಎನ್ನುವುದು ಕೇವಲ ಅಡೆತಡೆಯಲ್ಲ, ಅದು ನಮ್ಮ ದೃಢತೆಯನ್ನು ಪರೀಕ್ಷಿಸುವ ಒಂದು ಒರೆಗಲ್ಲು. ಬಂಗಾರವನ್ನು ಬೆಂಕಿಯಲ್ಲಿ ಸುಟ್ಟಷ್ಟೂ ಶುದ್ಧವಾಗುವಂತೆ, ಒಬ್ಬ ಸಾಧಕ ಟೀಕೆಗಳ ನಡುವೆ ತನ್ನ ವ್ಯಕ್ತಿತ್ವವನ್ನು ಪಳಗಿಸಿಕೊಳ್ಳಬೇಕು.

ಸಾಧಕನಾದವನು ಟೀಕೆಗಳಿಗೆ ತಕ್ಷಣ ಪ್ರತಿಕ್ರಿಯಿಸಬಾರದು. ಟೀಕೆಯಲ್ಲಿ ಸತ್ಯಾಂಶವಿದ್ದರೆ ಅದನ್ನು ತಿದ್ದಿ ಕೊಂಡು ತನ್ನ ಕೆಲಸವನ್ನು ಸುಧಾರಿಸಿಕೊಳ್ಳಬೇಕು. ಒಂದು ವೇಳೆ ಟೀಕೆ ಸುಳ್ಳಾಗಿದ್ದರೆ ಅದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಬೇಕು. ಈ ನಿರ್ಲಕ್ಷ್ಯದ ಕಲೆ ಒಬ್ಬ ವ್ಯಕ್ತಿಯನ್ನು ಮಾನಸಿಕವಾಗಿ ಸದೃಢಗೊಳಿಸುತ್ತದೆ. ಟೀಕೆ ಮಾಡುವವರು ಇತರರ ತಪ್ಪುಗಳನ್ನು ಹುಡುಕುವುದರಲ್ಲಿ ತಮ್ಮ ಅಮೂಲ್ಯ ಸಮಯವನ್ನು ವ್ಯರ್ಥ ಮಾಡಿದರೆ, ಸಾಧಕನು ತನ್ನ ಕೆಲಸವನ್ನು ಪರಿಪೂರ್ಣ ಗೊಳಿಸುವುದರಲ್ಲಿ ತೊಡಗುತ್ತಾನೆ.

ಕೊನೆಗೆ ಟೀಕಾಕಾರನ ಬತ್ತಳಿಕೆ ಖಾಲಿಯಾಗುತ್ತದೆ, ಆದರೆ ಸಾಧಕನ ಸೃಜನಶೀಲತೆ ಅಕ್ಷಯವಾಗುತ್ತದೆ.

ಕೆಲಸವೇ ನಮ್ಮ ಹೆಗ್ಗುರುತು: ಮನುಷ್ಯ ನಶ್ವರ, ಆದರೆ ಅವನು ಮಾಡುವ ಕೆಲಸಕ್ಕೆ ಸಾವಿಲ್ಲ. ನಾವು ಈ ಭೂಮಿಯಿಂದ ಹೋದ ಮೇಲೂ ನಮ್ಮ ಹೆಸರನ್ನು ಜೀವಂತವಾಗಿಡುವುದು ನಾವು ಮಾಡಿದ ಒಳ್ಳೆಯ ಕೆಲಸಗಳೇ ಹೊರತು, ನಾವು ಯಾರದೋ ವಿರುದ್ಧ ಮಾಡಿದ ವಾಗ್ವಾದಗಳಲ್ಲ. ಕೆಲಸ ಎಂಬುದು ಕೇವಲ ಹೊಟ್ಟೆಪಾಡಲ್ಲ, ಅದು ಒಂದು ರೀತಿಯ ಪ್ರಾರ್ಥನೆ. ಅದು ಮನುಷ್ಯನನ್ನು ಸ್ವಾರ್ಥದ ಚೌಕಟ್ಟಿನಿಂದ ಹೊರತಂದು ಲೋಕಹಿತದತ್ತ ಕೊಂಡೊಯ್ಯುತ್ತದೆ.

ಕುವೆಂಪು ಅವರು ಹೇಳಿದಂತೆ ವಿಶ್ವಮಾನವನಾಗಲು ನಾವು ಮಾಡುವ ಕೆಲಸದಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಇರಬೇಕು. ಟೀಕೆಗಳಿಗೆ ಹೆದರಿ ಕೆಲಸ ನಿಲ್ಲಿಸುವುದು ಎಂದರೆ ಹರಿಯುವ ನದಿ ಕಲ್ಲಿಗೆ ಹೆದರಿ ನಿಂತಂತೆ. ನದಿ ಹೇಗೆ ಕಲ್ಲನ್ನು ಸವೆಸಿ ಅಥವಾ ಅದನ್ನು ದಾಟಿ ಮುನ್ನಡೆಯುತ್ತದೆಯೋ, ಹಾಗೆಯೇ ನಮ್ಮ ಕೆಲಸವು ಎಲ್ಲಾ ವಿರೋಧಗಳನ್ನು ಮೆಟ್ಟಿ ಸಮಾಜದ ಉದ್ಧಾರಕ್ಕೆ ಕಾರಣವಾಗಬೇಕು.

ಕೆಲಸವು ಕರ್ತೃವಿನ ವ್ಯಕ್ತಿತ್ವವನ್ನು ಮೀರಿ ಬೆಳೆಯುತ್ತದೆ. ಯಾವಾಗ ಕೆಲಸವೊಂದು ಸಮಾಜದ ಹಿತಕ್ಕಾಗಿ ಅಥವಾ ಸೃಜನಶೀಲತೆಯಿಂದ ಕೂಡಿರುತ್ತದೆಯೋ, ಅದು ಇತಿಹಾಸದ ಪುಟಗಳಲ್ಲಿ ಅಳಿಸಲಾಗದ ಸಹಿಯಾಗುತ್ತದೆ.

ಕಾಲದ ಮೇಲಿನ ಸಹಿ: ಕಾಲದ ಓಟದಲ್ಲಿ ಎಲ್ಲವೂ ಮರೆಯಾಗುತ್ತವೆ. ಆದರೆ ಸೃಜನಶೀಲ ಕರ್ಮಕ್ಕೆ ಮರಣವಿಲ್ಲ. ಒಬ್ಬ ಶಿಲ್ಪಿ ಕೆತ್ತಿದ ವಿಗ್ರಹ ಶತಮಾನಗಳ ಕಾಲ ದೇವಸ್ಥಾನದ ಸೌಂದರ್ಯವನ್ನು ಹೆಚ್ಚಿಸುತ್ತದೆ. ಒಬ್ಬ ಲೇಖಕ ಬರೆದ ಪುಸ್ತಕ ಅವನ ನಂತರವೂ ಜನರಿಗೆ ದಾರಿದೀಪವಾಗುತ್ತದೆ. ಒಬ್ಬ ರೈತ ಬೆಳೆದ ಬೆಳೆ ಹಸಿವನ್ನು ನೀಗಿಸುತ್ತದೆ. ಈ ಕೆಲಸಗಳೆಲ್ಲವೂ ಟೀಕೆಗಳ ಅಬ್ಬರಕ್ಕಿಂತ ಮಿಗಿಲಾದವು. ನಕಾರಾತ್ಮಕ ಶಕ್ತಿಗಳು ಕೆಡವಲು ಪ್ರಯತ್ನಿಸಿದರೆ, ಸೃಜನಶೀಲ ಶಕ್ತಿಗಳು ಕಟ್ಟಲು ಪ್ರಯತ್ನಿಸುತ್ತವೆ. ಜಗತ್ತು ಯಾವಾಗಲೂ ಕಟ್ಟುವವರ ಪರವಾಗಿರುತ್ತದೆ.

ಕರ್ಮದ ಗೆಲುವು: ಬದುಕಿನ ಪಯಣದಲ್ಲಿ ನಾವು ನೆನಪಿಡಲೇಬೇಕಾದ ಸತ್ಯವೊಂದಿದೆ: ಟೀಕೆಗಳು ಕೇವಲ ಕ್ಷಣಿಕವಾದ ಮೋಡಗಳಿದ್ದಂತೆ. ಅವು ಸೂರ್ಯನನ್ನು ಸ್ವಲ್ಪ ಕಾಲ ಮುಚ್ಚಿಡ ಬಲ್ಲವೇ ಹೊರತು ಸೂರ್ಯನ ಅಸ್ತಿತ್ವವನ್ನೇ ಅಳಿಸಲಾರವು. ಸೂರ್ಯನು ತನ್ನ ಕೆಲಸವಾದ ಪ್ರಕಾಶಿಸುವುದನ್ನು ನಿಲ್ಲಿಸುವುದಿಲ್ಲ, ಹಾಗೆಯೇ ನಾವು ನಮ್ಮ ಕೆಲಸವನ್ನು ನಿಲ್ಲಿಸಬಾರದು.

ರಾಷ್ಟ್ರಕವಿ ಕುವೆಂಪು ಅವರು ಈ ಮಂತ್ರದ ಮೂಲಕ ನಮಗೆ ಕೇವಲ ಸಾಹಿತ್ಯಿಕ ಮೌಲ್ಯವನ್ನಷ್ಟೇ ಅಲ್ಲ, ಬದುಕುವ ಶ್ರೇಷ್ಠ ಕಲೆಯನ್ನೂ ಕಲಿಸಿದ್ದಾರೆ. ವರ್ತಮಾನದ ಈ ಗದ್ದಲದ ಯುಗದಲ್ಲಿ, ಟ್ರೋಲ್‌ಗಳು ಮತ್ತು ವಿಮರ್ಶೆಗಳ ನಡುವೆ ಹಾದಿ ತಪ್ಪದೆ, ನಮ್ಮ ಗುರಿಯತ್ತ ಗಮನ ಹರಿಸೋಣ. ಅನಗತ್ಯ ಶಬ್ದಗಳಿಗೆ ನಮ್ಮ ಶಕ್ತಿಯನ್ನು ವ್ಯಯಿಸದೆ, ಮೌನವಾಗಿ ನಮ್ಮ ಕರ್ತವ್ಯದಲ್ಲಿ ನಿರತರಾಗೋಣ. ಏಕೆಂದರೆ ಕಾಲ ಉರುಳಿದಂತೆ ಶಬ್ದಗಳು ಗಾಳಿಯಲ್ಲಿ ಲೀನವಾಗುತ್ತವೆ, ಆದರೆ ನಮ್ಮ ಶ್ರಮದ ಫಲವು ಮುಂದಿನ ತಲೆಮಾರಿಗೆ ಸ್ಫೂರ್ತಿಯಾಗಿ ಉಳಿಯುತ್ತದೆ...

– ಲಕ್ಷ್ಮೀಕಾಂತ್ ಎಲ್.ವಿ., ತುಮಕೂರು

31-12-2025 ದಿನ ಭವಿಷ್ಯ

ಮೇಷ: ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ. ನಿಮ್ಮ ಖರ್ಚುಗಳಲ್ಲಿ ಅನಿರೀಕ್ಷಿತ ಏರಿಕೆ ನಿಮ್ಮ ಮನಸ್ಸಿನ ಶಾಂತಿಗೆ ಭಂಗ ತರುತ್ತದೆ. ನಿಮ್ಮ ನಾಲಗೆ ನಿಮ್ಮ ಅಜ್ಜ ಅಜ್ಜಿಯಂದಿರ ಭಾವನೆಗಳಿಗೆ ಘಾಸಿ ಮಾಡುವುದರಿಂದ ನಿಮ್ಮ ಭಾಷೆಯನ್ನು ನಿಯಂತ್ರಿಸಿ.

ವೃಷಭ: ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ. ಮೊಮ್ಮಕ್ಕಳು ಅಪಾರ ಸಂತೋಷದ ಮೂಲವಾಗುತ್ತಾರೆ. ಬಿಡುವಿಲ್ಲದ ಬೀದಿಗಳಲ್ಲಿ, ನಿಮ್ಮ ಪ್ರಿಯತಮೆಯೇ ಅತ್ಯುತ್ತಮವಾಗಿರುವುದರಿಂದ ನೀವು ಅದೃಷ್ಟಶಾಲಿಗಳು ಎಂದು ನಿಮಗೆ ಅರಿವಾಗುತ್ತದೆ.

ಮಿಥುನ: ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ನಿಮ್ಮ ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಮತ್ತು ಇಂದು ತುಂಬಾ ಖರ್ಚು ಮಾಡಬೇಡಿ. ಸಂತೋಷದ ಚೈತನ್ಯದಾಯಕ – ಪ್ರಿಯವಾದ ಚಿತ್ತದ – ನಿಮ್ಮ ಖುಷಿಯ ಸ್ವಭಾವ ನಿಮ್ಮ ಸುತ್ತಲಿನವರಿಗೆ ಸಂತೋಷ ಮತ್ತು ಖುಷಿಯನ್ನು ತರುತ್ತದೆ.

ಕರ್ಕಾಟಕ: ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಯಶಸ್ಸಿಗೆ ಇಂದಿನ ಸೂತ್ರವೆಂದರೆ ನಾವೀನ್ಯತೆಯಿರುವ ಮತ್ತು ಉತ್ತಮ ಅನುಭವ ಹೊಂದ

ಪತ್ರಕರ್ತರು ನೇರ, ಸತ್ಯ ವರದಿಗೆ ಮುಂದಾಗಬೇಕು

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳಿಗೆ ಅಭಿನಂದಿಸಿದ ಶಾಸಕ ಎಚ್.ಕೆ.ಸುರೇಶ್

• ಪ್ರಜೋದಯ ವರದಿ

ಬೇಲೂರು: ಪತ್ರಕರ್ತರು ಸಮಾಜದ ಎರಡು ಕಣ್ಣುಗಳಿದ್ದಂತೆ. ಅವರು ಜನಸಾಮಾನ್ಯರ ಸಮಸ್ಯೆಗಳನ್ನು ತಾಲ್ಲೂಕು ಆಡಳಿತದ ಗಮನಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ನಾಲ್ಕನೇ ಅಂಗವಾಗಿರುವ ಮಾಧ್ಯಮ ಪ್ರತಿನಿಧಿಗಳು ನಿಷ್ಪಕ್ಷಪಾತ, ನೇರ, ಸತ್ಯ ನಿಷ್ಠ ವರದಿಗಳ ಮೂಲಕ ಸಮಾಜವನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಲು ಮುಂದಾಗಬೇಕು ಎಂದು ಶಾಸಕ ಎಚ್.ಕೆ.ಸುರೇಶ್ ಸಲಹೆ ನೀಡಿದರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಜಯ ಗಳಿಸಿದ ನೂತನ ಪದಾಧಿಕಾರಿಗಳಿಗೆ ಶಾಸಕ ಎಚ್.ಕೆ.ಸುರೇಶ್ ಸೋಮವಾರ ಪತ್ರಕರ್ತರ ಸಂಘದ ಕಚೇರಿಯಲ್ಲಿ ಅಭಿನಂದಿಸಿ ಮಾತನಾಡಿದ ಅವರು, ತಾಲ್ಲೂಕಿನ ಎಲ್ಲ ಪತ್ರಕರ್ತರಿಗೂ ವಿಶ್ರಾಂತಿ ಹಾಗೂ ಸುದ್ದಿ ಮಾಡುವುದಕ್ಕೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಪತ್ರಕರ್ತರ ಸಂಘದ ಕಟ್ಟಡದ ಮೇಲ್ಭಾಗದಲ್ಲಿ ಅತೀ ಶೀಘ್ರದಲ್ಲೆ ಶಾಸಕರ ಅನುದಾನದಲ್ಲಿ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಪತ್ರಕರ್ತರ ಸಂಘದ ಚುನಾವಣೆಯೂ ಯಾವುದೇ ಗೊಂದಲ, ಗಲಭೆಗಳಿಲ್ಲದೆ ಅತ್ಯುತ್ತಮವಾಗಿ ನಡೆದು ಎರಡು ಸ್ಥಾನಗಳಿಗೆ ಮಾತ್ರ ಚುನಾವಣೆ ನಡೆದಿದ್ದು, ಮುಂದಿನ ದಿನಗಳಲ್ಲಿ ಎಲ್ಲ ಸ್ಥಾನಗಳು ಸಹ ಅವಿರೋಧವಾಗಿ ಆಯ್ಕೆಯಾಗುವಂತಹ ಸಂಘವಾಗಿ ಹೊರಹೊಮ್ಮಲಿ. ಮತ್ತು ಚುನಾವಣೆಯಲ್ಲಿ ಪದಾಧಿಕಾರಿಗಳಾಗಿ ಆಯ್ಕೆಯಾದ ಅಧ್ಯಕ್ಷ ಶಿವರಾಜ್, ಪ್ರಧಾನ ಕಾರ್ಯದರ್ಶಿ ಬಿ.ಎಲ್.ಲಕ್ಷ್ಮಣ್, ಖಜಾಂಚಿ ಲೋಹಿತ್ ಸೇರಿದಂತೆ ಎಲ್ಲ ಪದಾಧಿಕಾರಿಗಳು ಸಂಘವನ್ನು ಮತ್ತಷ್ಟು ಬಲಿಷ್ಠಗೊಳಿಸಿ, ಪತ್ರಕರ್ತರ ಹಿತ ಕಾಯುವುದರೊಂದಿಗೆ ಸಾಮಾಜಿಕ ಜವಾಬ್ದಾರಿ ಅರಿತು ಕೆಲಸ ಮಾಡುತ್ತಾರೆಂಬ ವಿಶ್ವಾಸವಿದೆ. ಅಲ್ಲದೆ ಪತ್ರಕರ್ತರ ಸಮಸ್ಯೆಗಳು ಹಾಗೂ ಅವರ ಹಿತಾಸಕ್ತಿಗಾಗಿ ಸರ್ಕಾರದಿಂದ ಅಗತ್ಯ ಸಹಕಾರ ನೀಡುವಂತೆ ಒತ್ತಾಯಿಸಲಾಗುವುದು ಎಂದು ಹೇಳಿದರು.

ಪತ್ರಕರ್ತರ ಸಂಘದ ನೂತನ ಅಧ್ಯಕ್ಷ ಬಿ.ಬಿ.ಶಿವರಾಜ್ ಮಾತನಾಡಿ, ಕ್ಷೇತ್ರದ ಅಭಿವೃದ್ಧಿ ವಿಚಾರವಾಗಿ ಶಾಸಕ ಎಚ್.ಕೆ.ಸುರೇಶ್‌ರವರು ಮುಖ್ಯಮಂತ್ರಿಗಳು, ಸಚಿವರೊಂದಿಗೆ ನಿಕಟ ಸಂಪರ್ಕ ಹೊಂದಿ ಅನುದಾನ ತಂದು ಅಭಿವೃದ್ಧಿ ಕೆಲಸ ಮಾಡಿಸುತ್ತಿದ್ದಾರೆ. ಇವರು ಬಡವರು, ನಿರ್ಗತಿಕರ ಕೆಲಸ ಕಾರ್ಯಗಳನ್ನು ಮಾಡುತ್ತಿರುವುದು ಶ್ಲಾಘನೀಯವಾಗಿದೆ. ಇದರೊಂದಿಗೆ ನಮ್ಮ ಪತ್ರಕರ್ತರ ಸಂಘದ ಕಟ್ಟಡ ಸ್ವಲ್ಪ ಶಿಥಿಲವಾಗಿದ್ದು, ಮೇಲ್ಭಾಗದಲ್ಲಿ ಮತ್ತೊಂದು ಕಟ್ಟಡ ನಿರ್ಮಿಸಲು ಸಹಕಾರ ನೀಡಬೇಕು. ಮತ್ತು ತಾಲೂಕಿನ ಪತ್ರಕರ್ತರ ಹಕ್ಕು, ಗೌರವ, ಭದ್ರತೆಯಿಗಾಗಿ ಸಂಘ ಸದಾ ಹೋರಾಟ ಮಾಡಲಿದೆ ಎಂದರು.

ಪೊಲೀಸ್ ಇನ್ಸ್‌ಪೆಕ್ಟರ್ ರೇವಣ್ಣ ಮಾತನಾಡಿ, ಸಾರ್ವಜನಿಕ ಕ್ಷೇತ್ರದಲ್ಲಿ ಪತ್ರಕರ್ತರು ಹಾಗೂ ಪೊಲೀಸರ ಪಾತ್ರ ಮಹತ್ತರದ್ದಾಗಿದೆ. ಸಮಾಜದಲ್ಲಿ ಯಾವುದೇ ಘಟನೆಗಳು ನಡೆದರೂ ಅದನ್ನು ವಿಶ್ಲೇಷಿಸಿ, ಪರಿಶೀಲಿಸಿ ಸುದ್ದಿ ಮಾಡುವಲ್ಲಿ ಇಲ್ಲಿನ ಪತ್ರಕರ್ತರು ಶ್ರಮ ವಹಿಸುತ್ತಾರೆ. ಅವರೊಂದಿಗೆ ನಮ್ಮ ಇಲಾಖೆ ಸಮನ್ವಯ ಸಾಧಿಸಿ ನಾಗರೀಕರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಉತ್ತಮ ಕೆಲಸ ಮಾಡಲಿದ್ದೇವೆ. ಸಾರ್ವಜನಿಕ ಹಿತದೃಷ್ಟಿಯಿಂದ ಪತ್ರಕರ್ತರು ನೀಡುವ ಸಹಕಾರ ಶ್ಲಾಘನೀಯವಾಗಿದೆ ಎಂದರು.

ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಲಕ್ಷ್ಮಣ್, ಖಜಾಂಚಿ ಲೋಹಿತ್, ಸಹ ಕಾರ್ಯದರ್ಶಿಗಳಾದ ಗಣೇಶ್, ದಿನೇಶ್ ಬೆಳ್ಳಾವರ, ನಿರ್ದೇಶಕರಾದ ರಮೇಶ್, ವಿಜಯ್‌ಕುಮಾರ್, ಚಂದ್ರಶೇಖರ್, ಸುನೀಲ್, ಆರಾಧ್ಯ, ರವಿಹೊಳ್ಳ, ಜಗಧೀಶ್, ಮಾಜಿ ಜಿ.ಪಂ. ಸದಸ್ಯ ಸಿ.ಎಸ್.ಪ್ರಕಾಶ್ ಇನ್ನಿತರರಿದ್ದರು.

ಸರ್ಕಾರಿ ಶಾಲೆ ಉಳಿಸುವುದು ಗ್ರಾಮಸ್ಥರ ಕರ್ತವ್ಯ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಗ್ರಾಮಸ್ಥರ ಸಹಕಾರ ವಿದ್ದಲ್ಲಿ ಮಾತ್ರ ಸರ್ಕಾರಿ ಶಾಲೆಗಳು ಉಳಿಯಲು ಸಾಧ್ಯ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಮಸಕನಹಳ್ಳಿ ಗ್ರಾಮದಲ್ಲಿ ಲೆಕ್ಕ ಶೀರ್ಷಿಕೆ 2022-23 ನೇ ಸಾಲಿನ ವಿವೇಕ ಯೋಜನೆಯಡಿ 13.90 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಶಾಲಾ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿ, ತಮ್ಮ ಮಕ್ಕಳನ್ನು ಸೇರಿಸುವ ಮೂಲಕ ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವುದು ಗ್ರಾಮಸ್ಥರ ಕರ್ತವ್ಯ ಎಂದು ಹೇಳಿದರು.

ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಮಕ್ಕಳ ಶೈಕ್ಷಣಿಕ ಭವಿಷ್ಯಕ್ಕೆ ಜೀವ ತುಂಬಬೇಕಿದೆ. ಶಾಲೆ ಎಂದರೆ ಮಕ್ಕಳ ಭವಿಷ್ಯ ರೂಪಿಸುವ ಕೇಂದ್ರವಾಗಿದೆ. ದೇಗುಲ ಹಾಗೂ ಶಾಲೆಯ ಗಂಟೆ ಮೊಳಗಿದರೆ ಮಾತ್ರ ಗ್ರಾಮ ಪ್ರಗತಿ ಕಾಣಲು ಸಾಧ್ಯ ಎಂದರು.

ಗ್ಯಾರಂಟಿ ಯೋಜನೆಗಳ ನಿರ್ವಹಿಸುವ ಬರದಲ್ಲಿ ಸರ್ಕಾರವು ಅಗತ್ಯ ಅನುದಾನ ಬಿಡುಗಡೆ ಮಾಡುವಲ್ಲಿ ವಿಳಂಬವಾಗುತ್ತಿದೆ. ಅನುದಾನಗಳ ಕೊರತೆ ಪರಿಣಾಮ ಅಭಿವೃದ್ಧಿಗೆ ಸಮಸ್ಯೆಯಾಗುತ್ತಿದೆ. ಸದ್ಯ ಲಭ್ಯವಾಗುವ ಅನುದಾನ ಬಳಕೆ ಮಾಡಿಕೊಂಡು ಸಾಕಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಂಗಳಮ್ಮ, ಮಾಜಿ ಅಧ್ಯಕ್ಷರಾದ ರಾಜಣ್ಣ, ಶಿವನಂಜೇಗೌಡ, ಬಿಳಿಕೆರೆ ರಂಗೇಗೌಡ, ಪೃಥ್ವಿಕುಮಾರ್, ಮಾಜಿ ಸದಸ್ಯ ಸುರೇಶ್, ಪ್ರಮುಖರಾದ ಕುಮಾರಸ್ವಾಮಿ, ಮಂಜುನಾಥ್, ನಿವೃತ್ತ ಉಪನ್ಯಾಸಕ ಶಿವರಾಜ್, ಪಿಡಿಒ ಕಿರಣ್, ಎಸ್ಡಿಎಂಸಿ ಅಧ್ಯಕ್ಷ ಆನಂದ್‌ಕುಮಾರ್, ಮುಖ್ಯ ಶಿಕ್ಷಕಿ ಪ್ರೇಮಕುಮಾರಿ, ಸಹ ಶಿಕ್ಷಕರಾದ ಡಿ.ಆರ್.ನರಸಿಂಹಶೆಟ್ಟಿ, ವರಲಕ್ಷ್ಮಿ, ಎಸ್ಡಿಎಂಸಿ ಸದಸ್ಯರು, ಪಾಲಕರು ಇದ್ದರು.

ಜಾಗೃತಿ ವಹಿಸಿದರೆ ಏಡ್ಸ್‌ನಿಂದ ದೂರವಿರಲು ಸಾಧ್ಯ

• ಪ್ರಜೋದಯ ವರದಿ

ಅರಕಲಗೂಡು: ಏಡ್ಸ್ ಹರಡುವ ವಿಧಾನ ಕುರಿತು ಅರಿವು ಮೂಡಿಸಿಕೊಂಡು ಜಾಗೃತಿ ವಹಿಸಿದರೆ ಈ ರೋಗದಿಂದ ದೂರವಿರಬಹುದು ಎಂದು ಹಿರಿಯ ಶ್ರೇಣಿ ನ್ಯಾಯಾಧೀಶ ಬಿ.ಕೆ.ನಾಗೇಶಮೂರ್ತಿ ತಿಳಿಸಿದರು.

ಪಟ್ಟಣದ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಆರೋಗ್ಯ ಇಲಾಖೆ, ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ರೋಟರಿ ಕ್ಲಬ್ ಹಾಗೂ ಇತರೆ ಇಲಾಖೆ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಏರ್ಪಡಿಸಿದ್ದ ವಿಶ್ವ ಏಡ್ಸ ಅರಿವು ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿ, ವೈಯಕ್ತಿಕ ತಪ್ಪಗಳಿಂದಾಗಿ ಈ ಖಾಯಿಲೆಗೆ ತುತ್ತಾಗದಂತೆ ಜಾಗೃತಿ ವಹಿಸುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ ಪುಷ್ಪಲತಾ ಮಾತನಾಡಿ, ಏಡ್ಸ್ ಪ್ರಕರಣಗಳು ಹೆಚ್ಚುತ್ತಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಇದಕ್ಕೆ ತುತ್ತಾಗುತ್ತಿದ್ದಾರೆ. ಯುವ ಜನತೆ ಸೆಳೆತಗಳಿಗೆ ಬಲಿಯಾಗಿ ಆರೋಗ್ಯ ಹಾಳು ಮಾಡಿಕೊಳ್ಳದಂತೆ ಕಿವಿಮಾತು ಹೇಳಿದರು.

ಸಾರ್ವಜನಿಕ ಆಸ್ಪತ್ರೆಯ ಆಪ್ತ ಸಮಾಲೋಚಕ ಪರಶುರಾಮ್ ಶಿರೂರ್ ಮಾತನಾಡಿ, ದೇಶದಲ್ಲಿ ಕರ್ನಾಟಕ ಸೋಂಕಿತರ ಸಂಖ್ಯೆಯಲ್ಲಿ ಮೂರನೇ ಸ್ಥಾನದಲ್ಲಿದ್ದು ರಾಜ್ಯದಲ್ಲಿ ಹಾಸನ ಜಿಲ್ಲೆ 13ನೇ ಸ್ಥಾನದಲ್ಲಿ ಜಿಲ್ಲೆಯಲ್ಲಿ ತಾಲ್ಲೂಕು ಐದನೇ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ 13,293 ಜನ ಸೋಂಕಿತರಿದ್ದು 9876 ಜನರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಇದರಲ್ಲಿ 239 ಮಕ್ಕಳಲ್ಲಿ ಸೋಂಕನ್ನು ಪತ್ತೆ ಹಚ್ಚಲಾಗಿದೆ ಎಂದು ಮಾಹಿತಿ ನೀಡಿದರು.

2002 ರಿಂದ 2025 ವರೆಗೆ ತಾಲ್ಲೂಕಿನಲ್ಲಿ 913 ಸೋಂಕಿತ ಖಚಿತ ಪ್ರಕರಣಗಳನ್ನುಪತ್ತೆ ಹಚ್ಚಲಾಗಿದೆ. ಡೊಳ್ಳು ಕುಣಿತ, ತೊಗಲಗೊಂಬೆ ಆಟ, ಶಾಲೆ- ಕಾಲೇಜುಗಳಲ್ಲಿ ಹದಿಹರೆಯ ದವರಿಗೆ ಆರೋಗ್ಯ ಶಿಕ್ಷಣ, ರೆಡ್ ರಿಬ್ಬನ್ ಕ್ಲಬ್ ಗಳ ಮೂಲಕ ಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಕೈಗೊಂಡಿದ್ದು ಹೈ ರಿಸ್ಕ್ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಉಚಿತ ತಪಾಸಣಾ ಶಿಬಿರಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಎಂ. ಆರ್.ಗಿರೀಶ್, ರೋಟರಿ ಮಾಜಿ ಅಧ್ಯಕ್ಷ ಗಂಗಾಧರ್, ತರಬೇತಿ ಸಂಸ್ಥೆ ಪ್ರಾಚಾರ್ಯ ತೌಫಿಕ್ ಅಹಮದ್, ತರಬೇತಿ ಅಧಿಕಾರಿಗಳಾದ ಎ. ಎಸ್. ಯೋಗನಾಥ್. ದೇವರಾಜ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮಂಜುಳ, ಡಾ. ಪ್ರೀತಮ್, ಲಲಿತ, ಉಮೇಶ್, ತಂತ್ರಜ್ಞೆ ಗೌರಮ್ಮ ಇತರರಿದ್ದರು.

ಜಾಗತಿಕ ಮಟ್ಟದಲ್ಲಿ ಕನ್ನಡ ಅಸ್ಮಿತೆ ಗಟ್ಟಿಗೊಳಿಸಿದವರು ಕುವೆಂಪು

• ಪ್ರಜೋದಯ ವರದಿ

ಆಲೂರು: ಕನ್ನಡಕ್ಕೆ ಮೊಟ್ಟಮೊದಲ ಜ್ಞಾನಪೀಠ, ಮೊದಲ ಪಂಪ ಪ್ರಶಸ್ತಿ ತಂದುಕೊಟ್ಟು ಇದೊಂದು ಸರ್ವಜನಾಂಗದ ಶಾಂತಿಯ ತೋಟವೆಂದು ಹೃದಯ ವೈಶಾಲ್ಯತೆ ತೋರಿ ಕನ್ನಡದ ಛಾಪನ್ನು ಜಾಗತಿಕ ಮಟ್ಟದಲ್ಲಿ ಗಟ್ಟಿಗೊಳಿಸಿದವರು ವಿಶ್ವಮಾನವ ಕವಿ ಕುವೆಂಪುರವರು ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ಎಂ.ಶ್ರೀನಿವಾಸ ತಿಳಿಸಿದರು.

ತಾಲ್ಲೂಕು ಕ್ರೀಡಾಂಗಣದಲ್ಲಿ ಶಿಕ್ಷಣ ಇಲಾಖೆಯ ನೌಕರರಿಗಾಗಿ ಮಹಾಕವಿ ಕುವೆಂಪು ಜನ್ಮದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ವಿಶ್ವಮಾನವ ಕ್ರಿಕೆಟ್ ಕಪ್ 2025 ಟೂರ್ನಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನೌಕರರಿಗೆ ಕ್ರೀಡೆಗಳು ತಮ್ಮ ತಮ್ಮ

ವಿಶ್ವಮಾನವ ಕ್ರಿಕೆಟ್ ಕಪ್ 2025 ಟೂರ್ನಿ

ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳುವಲ್ಲಿ, ಕ್ರಿಯಾಶೀಲತೆ ಕಾಪಾಡಿಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಶಿಕ್ಷಕರ ಸಂಘ ಅಥವಾ ನೌಕರರ ಸಂಘ ಮಾಡಬೇಕಾದ ಇಂತಹ ಕಾರ್ಯಗಳನ್ನು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಮಾಡುತ್ತಿರುವುದು ಶ್ಲಾಘನೀಯವಾದುದು ಎಂದರು.

ಸಮಾಜ ಸೇವಕ ಕಟ್ಟೆಗದ್ದೆ ನಾಗರಾಜ್ ಮಾತನಾಡಿ, ವರ್ಷವಿಡೀ ಮಕ್ಕಳ ಶೈಕ್ಷಣಿಕ ಅಭ್ಯುದಯಕ್ಕೆ ಸದಾ ತುಡಿಯುವ, ಮಿಡಿಯುವ ಶಿಕ್ಷಕರುಗಳಿಗೆ ಅವರ ಆಸಕ್ತಿದಾಯಕ ಕ್ರಿಕೆಟ್ ಟೂರ್ನಮೆಂಟ್ ಶಿಕ್ಷಕರ ಮನೋಲ್ಲಾಸವನ್ನು ಹೆಚ್ಚಿಸುತ್ತದೆ. ಕನ್ನಡನಾಡು ಕಂಡತಹ ಸರ್ವಶ್ರೇಷ್ಠ ಕವಿ ಕುವೆಂಪು ಜನ್ಮ ದಿನಾಚರಣೆ ನಿಮಿತ್ತ ಇಂತಹದ್ದೊಂದು ಟೂರ್ನಿ ಹಮ್ಮಿಕೊಂಡ ಸಾಹಿತ್ಯ ವೇದಿಕೆಯ ನಡೆ ಮೆಚ್ಚುವಂಥದ್ದು, ವೇದಿಕೆ ಹಮ್ಮಿಕೊಳ್ಳುವ ಸಮಾಜಮುಖಿ ಕಾರ್ಯಗಳಿಗೆ ನಾವು ಸದಾ ಬೆಂಬಲವಾಗಿ ನಿಲ್ಲುತ್ತೇವೆ ಎಂದರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ತಾಲ್ಲೂಕು ಘಟಕದ ಅಧ್ಯಕ್ಷ ಮಣಿಪುರ ಕೃಷ್ಣೇಗೌಡ, ರಾಜ್ಯ ಸರಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಡಿ.ಎಂ. ವರದರಾಜ್, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಎಂ.ಆರ್. ಶ್ರೀನಿವಾಸ್, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕ ಎಂ.ಆರ್. ವೇಣುಗೋಪಾಲ್, ಆಲೂರು ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ನವೀನ್ ಭೈರಾಪುರ, ವೇದಿಕೆಯ ರಾಜ್ಯಾಧ್ಯಕ್ಷ ಕೊಟ್ರೇಶ್ ಎಸ್. ಉಪ್ಪಾರ್ ಇತರರು ಉಪಸ್ಥಿತರಿದ್ದರು.

ಪೋಷಕರು ತಮ್ಮ ಮಕ್ಕಳ ಮನಸ್ಥಿತಿ ಅರಿತು ನಡೆಯಬೇಕು

ಸಹಕಾರ ನೀಡಿದರೆ ಪ್ರತಿಯೊಂದು ಮಗುವು ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ

• ಪ್ರಜೋದಯ ವರದಿ

ಹಾಸನ: ಪೋಷಕರು ತಮ್ಮ ಮಕ್ಕಳ ಮನಸ್ಥಿತಿಯನ್ನು ಅರಿಯುವುದರ ಜೊತೆಗೆ ಅವರುಗಳು ಯಾವ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ್ದಾರೆ ಎಂಬುವುದನ್ನು ಅರಿತು ಸಹಕಾರ ನೀಡಿದರೆ ಪ್ರತಿಯೊಂದು ಮಗುವು ಜೀವನದಲ್ಲಿ ಸಾಧನೆ ಮಾಡಲು ಸಾಧ್ಯವಾಗಲಿದೆ ಪ್ರಗತಿಪರ ಕೃಷಿಕ ಹಾಗೂ 2025ರ ಕನ್ನಡ ರಾಜ್ಯೋತ್ಸವ ರಾಜ್ಯ ಪ್ರಶಸ್ತಿ ಪುರಸ್ಕೃತ ಡಾ.ಎಂ.ಸಿ. ರಂಗಸ್ವಾಮಿ ಅಭಿಪ್ರಾಯಪಟ್ಟರು.

ಹಾಸನಾಂಬ ಕಲಾಕ್ಷೇತ್ರದಲ್ಲಿ ಈಚೆಗೆ ವಿಜಯನಗರ ಬಡಾವಣೆಯಲ್ಲಿರುವ ಟೈಮ್ಸ್ ಅಂತರಾಷ್ಟ್ರೀಯ ಶಾಲೆ ವತಿಯಿಂದ ನಡೆದ ಟೈಮ್ಸ್ ಸಂಭ್ರಮ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಪೋಷಕರ ಆಸೆ ಆಕಾಂಕ್ಷೆಗಾಗಿ ಮಕ್ಕಳ ಮೇಲೆ ಒತ್ತಡ ಹೇರುವ ಮೂಲಕ ಮಕ್ಕಳಲ್ಲಿನ ಆಸೆ ಆಕಾಂಕ್ಷೆಗಳನ್ನು ನಾವು ಕಡೆಗಣಿಸುತ್ತಿದ್ದೇವೆ. ಮಕ್ಕಳನ್ನು ಆರಂಭದಲ್ಲಿ ಉತ್ತಮ ಸಂಸ್ಕೃತಿಯನ್ನು ಕಲಿಸುವ ಮೂಲಕ ಅವರನ್ನು ಸಮಾಜದಲ್ಲಿ ಉತ್ತಮ ವ್ಯಕ್ತಿಗಳನ್ನಾಗಿ ಮಾಡಬೇಕು. ಆ ನಂತರ ಮಕ್ಕಳು ದೊಡ್ಡವರಾಗುತ್ತಾ ಅವರಲ್ಲಿ ಯಾವ ಕ್ಷೇತ್ರದ ಮೇಲೆ ಆಸಕ್ತಿ ಇರುತ್ತದೆಯೊ ಆ ಕ್ಷೇತ್ರದ ಕಡೆಗೆ ಅವರನ್ನು ಬೆಳೆಯಲು ಸಹಕಾರ ನೀಡುವ ಮೂಲಕ ಅವರನ್ನು ಬೆಂಬಲಿಸಬೇಕು. ಹಾಗಾದಾಗ ಮಾತ್ರ ಯಾವುದೇ ಒಬ್ಬ ಮಗು ಸಮಾಜದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು.

ಇಂದು ಅನೇಕ ಯುವಕರು ನಿರುದ್ಯೋಗಿಗಳಾಗಿ ಉಳಿಯುತ್ತಿದ್ದಾರೆ. ಇಂದು ಸಮಾಜದಲ್ಲಿ ಕೆಲಸ ಮಾಡಲು ಅನೇಕ ಅವಕಾಶಗಳಿದ್ದು, ಪ್ರತಿಯೊಬ್ಬರು ತಮಗೆ ದೊರೆಯುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಯಾವುದೇ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡರು ಆ ಕ್ಷೇತ್ರದಲ್ಲಿ ಶ್ರದ್ಧೆ, ನಿಷ್ಠೆಯಿಂದ ಕೆಲಸ ಮಾಡಿದರೆ ಸಾಧನೆ ಮಾಡಲು ಸಾಧ್ಯ. ಯುವಕರು ಈ ದೇಶದ ಆಸ್ತಿ ಅವರನ್ನು ಸರಿದಾರಿಯಲ್ಲಿ ನಡೆಯುವಂತೆ ಮಾಡಬೇಕಾದ ಹೊಣೆಗಾರಿಕೆ ಪ್ರತಿಯೊಬ್ಬ ಹಿರಿಯರ ಮೇಲಿದೆ. ಶಾಲಾ ಹಂತದಲ್ಲಿ ಮಕ್ಕಳಿಗೆ ಮಾನವೀಯ ಗುಣಗಳನ್ನು ತಿಳಿಸಿಕೊಡುವ ಕೆಲಸ ಆಗಬೇಕಿದೆ. ಗುರು ಹಿರಿಯರನ್ನು ಮಕ್ಕಳು ಗೌರವದಿಂದ ಕಾಣುವ ಗುಣಗಳು, ದೇಶಕ್ಕಾಗಿ ದುಡಿಯುವ ಮನಸ್ಥಿತಿಯನ್ನು ಮಕ್ಕಳಲ್ಲಿ ಬೆಳೆಸಬೇಕಿದೆ ಎಂದು ಹೇಳಿದರು.

ಟೈಮ್ಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಟೈಮ್ಸ್ ಗಂಗಾಧರ ಬಿ.ಕೆ. ಮಾತನಾಡಿ, ಸಮಾಜದಲ್ಲಿ ಸಾಧನೆ ಮಾಡಿ ಇತರರಿಗೆ ಮಾದರಿಯಾದ ವ್ಯಕ್ತಿಗಳನ್ನು ನಾವು ಸಮಾಜದ ಮುಖ್ಯವಾಹಿನಿಗೆ ಕರೆತರಬೇಕಾದ ಅವಶ್ಯಕತೆ ಇದೆ. ಜೀವನದ ಅನುಭವದಲ್ಲಿ ಕಷ್ಟಗಳನ್ನು ಎದುರಿಸಿ ಬದುಕು ಕಟ್ಟಿಕೊಂಡು ಇಂದು ಇತರರಿಗೆ ಮಾದರಿಯಾಗಿ ಬದುಕುವ ವ್ಯಕ್ತಿಗಳನ್ನು ಮಕ್ಕಳ ಮುಂದೆ ಕರೆತಂದು ಅವರಿಂದ ಮಕ್ಕಳಿಗೆ ಹಿತವಚನಗಳನ್ನು ತಿಳಿಸಿಕೊಡಬೇಕುಎಂದರು.

ಶಿವಮೊಗ್ಗ ಆಕ್ಸಫರ್ಡ್ ಶಾಲೆಯ ಅಧ್ಯಕ್ಷ ಶ್ರೀನಿವಾಸ್, ಕಾರ್ಯದರ್ಶಿ ಲೋಕೇಶ್, ಶಾಲೆಯ ಮುಖ್ಯ

ವಿಬಿ-ಜಿ ರಾಮ್ ಜಿ ಕಾಯ್ದೆ ವಾಪಸ್‌ಗೆ ಸಿದ್ದರಾಮಯ್ಯ ಆಗ್ರಹ

• ಪ್ರಜೋದಯ ವರದಿ

ಬೆಂಗಳೂರು: ಉದ್ಯೋಗ ಖಾತರಿ ಯೋಜನೆಯಿಂದ ಮಹಾತ್ಮ ಗಾಂಧಿ ಹೆಸರು ತೆಗೆದು ಹಾಕುವ ವಿಕಸಿತ ಭಾರತ-ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ-ಜಿ ರಾಮ್ ಜಿ) ಕಾಯ್ದೆ ಅನುಷ್ಠಾನ ಗೊಳಿಸದಂತೆ ಒತ್ತಾಯಿಸಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಮಂಗಳ ವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಈ ಹೊಸ ಕಾನೂನು ಮೂಲಭೂತ ವಾಗಿ ಉದ್ಯೋಗ ಖಾತರಿ ಚೌಕಟ್ಟನ್ನು ಮತ್ತು ಸಹಕಾರಿ ಒಕ್ಕೂಟವನ್ನು ದುರ್ಬಲ ಗೊಳಿಸುತ್ತದೆಂದು ಸಿದ್ದರಾಮಯ್ಯ ಅವರು ಎಚ್ಚರಿಸಿದ್ದಾರೆ. ಹೊಸ ಕಾಯ್ದೆಯು 258 ಮತ್ತು 250ನೇ ವಿಧಿಯ ಸ್ಪಷ್ಟ ಉಲ್ಲಂಘನೆಯಾಗಿದೆ. ರಾಜ್ಯಗಳ ಜೊತೆಗೆ ಚರ್ಚೆ ನಡೆಸದೆ ಜಾರಿಗೆ ತರಲಾಗಿದೆ. ಈ ವಿಧಾನವು ಸಹಕಾರಿ ಒಕ್ಕೂಟದ ನಾಶಕ್ಕೆ ದಾರಿ ಮಾಡಿ ಕೊಡುತ್ತದೆ. ಹಾಗಾಗಿ ಜಿ ರಾಮ್ ಜಿ ಕಾಯಿದೆ ಜಾರಿಗೊಳಿಸಬೇಡಿ. ಸಮೃದ್ಧ ಭಾರತ ನಿರ್ಮಿಸ ಬೇಕೆಂದು ಮನವಿ ಮಾಡುತ್ತೇನೆ ಎಂದಿದ್ದಾರೆ.

ಈ ಹಿಂದಿನ ಮನರೇಗಾ ಯೋಜನೆ ಅಡಿಯಲ್ಲಿ ಕೇಂದ್ರ ಸರ್ಕಾರ ಶೇ.90 ಹಾಗು ರಾಜ್ಯ ಶೇ.10 ರಷ್ಟು ಹಣ ವಿನಿಯೋಗ ಮಾಡುತ್ತಿತ್ತು. ಈಗಿನ ಕಾಯ್ದೆಯು ರಾಜ್ಯ ಸರ್ಕಾರದ ಆರ್ಥಿಕತೆಗೆ ಹೊರೆಯಾಗಲಿದೆ. ಹೊಸ ಕಾಯ್ದೆಯು ಅದನ್ನು ಬಹುತೇಕ ರಾಜ್ಯಗಳಿಗೆ 60:40ಕ್ಕೆ ಬದ ಲಾಯಿಸಿದೆ. ಇದು ಈಗಾಗಲೇ ಜಿಎಸ್‌ಟಿ ಪರಿಹಾರದ ಕೊರತೆ ಹಾಗು ಅನ್ಯಾಯಕರ ಹಣ ಕಾಸು ವಿಂಗಡಣೆ ಕಾರಣದಿಂದ ಆರ್ಥಿಕ ಒತ್ತಡ ದಲ್ಲಿರುವ ರಾಜ್ಯಗಳ ಮೇಲೆ ಹೆಚ್ಚಿನ ಭಾರ ಹೇರುತ್ತಿದೆ. ಈ ಬದಲಾವಣೆಯನ್ನು ರಾಜ್ಯ ಸರ್ಕಾರಗಳೊಂದಿಗೆ ಅರ್ಥ ಪೂರ್ಣ ಸವಲೋಚನೆ ಇಲ್ಲದೆ ಜಾರಿಗೊಳಿಸಲಾಗಿದೆ ಎಂದು ಹೇಳಿದ್ದಾರೆ.

ಉದ್ಯೋಗ ಭರವಸೆ ಕಾಯ್ದೆ ಕೇವಲ ಕಲ್ಯಾಣ ಯೋಜನೆಯಲ್ಲ. ಅದು ಮಹಾತ್ಮ ಗಾಂಧಿ ಯವರ ಹೆಸರನ್ನು ಹೊತ್ತಿರುವ, ಗ್ರಾಮ ಸ್ವರಾಜ್ಯ ಮತ್ತು ಅಂತ್ಯೋದಯದ ಮೌಲ್ಯಗಳನ್ನು ಪ್ರತಿ ಬಿಂಬಿಸುವ, ಐತಿಹಾಸಿಕ ಹಾಗು ಜಾಗತಿಕ ವಾಗಿ ಪ್ರಶಂಸಿತ ಹಕ್ಕು ಆಧಾರಿತ ಕಾನೂನು. ಈ ಕಾಯ್ದೆಯಿಂದ ಅವರ ಹೆಸರನ್ನು ತೆಗೆದು ಹಾಕುವುದು ದುರ್ಭಾಗ್ಯಕರ ಸಂದೇಶವನ್ನು ನೀಡುತ್ತದೆ ಮತ್ತು ಅದರ ನೈತಿಕ ಶಕ್ತಿಯನ್ನು ಕುಗ್ಗಿಸುತ್ತದೆ. ಈ ವಿಧಾನವು ಸಹಕಾರಿ ಒಕ್ಕೂಟದ ನಾಶಕ್ಕೆ ದಾರಿಯಾಗಿರುವ ಕಾರಣ ವಿಬಿ-ಜಿ ರಾಮ್ ಜಿ ಕಾಯ್ದೆಯನ್ನು ಸ್ಥಗಿತಗೊಳಿಸುವಂತೆ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಿ: ಡಿ.ಸಿ.

• ಪ್ರಜೋದಯ ವರದಿ

ಹಾಸನ: ಮಕ್ಕಳ ಸುರಕ್ಷತೆಗೆ ಮೊದಲ ಆದ್ಯತೆ ನೀಡಿ ಅಗತ್ಯ ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಮಕ್ಕಳ ಸುರಕ್ಷತೆ ಕುರಿತು ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮಕ್ಕಳ ಸುರಕ್ಷತೆಯಲ್ಲಿ ಪೋಷಕರ ಪಾತ್ರ ಬಹು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಪೋಷಕರು, ಶಿಕ್ಷಕರು ಹಾಗೂ ಮಕ್ಕಳಿಗೆ ಅರಿವು ಮೂಡಿಸುವ ಮೂಲಕ ಬಲಪಡಿಸಬೇಕು. ಜೊತೆಗೆ ಮಕ್ಕಳ ಸುರಕ್ಷತೆಗೆ ಎಲ್ಲಾರೂ ಕೈಜೋಡಿಸಬೇಕೆಂದು ತಿಳಿಸಿದರು.

ಎಲ್ಲಾ ಶಾಲೆಗಳಲ್ಲಿ ಆಪ್ತ ಸಮಾಲೋಚನಾ ಕೇಂದ್ರ ಕಡ್ಡಾಯವಾಗಿ ಇರಬೇಕೆಂದ ಅವರು ಮಕ್ಕಳು ಯಾವುದೇ ವಿಷಯವನ್ನು ಮುಚ್ಚಿಡದೆ ನಿರ್ಭಿತಿಯಿಂದ ಹೇಳಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಲು ತಿಳುವಳಿಕೆ ನೀಡಬೇಕು. ಹೆಣ್ಣು ಮಕ್ಕಳ ಸ್ವಯಂ ಸುರಕ್ಷತೆಗೆ ಸಜ್ಜುಗೊಳಿಸಲು ಕರಾಟೆ ತರಬೇತಿ ನೀಡಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮಕ್ಕಳನ್ನು ಸೂಕ್ಷ್ಮವಾಗಿ ಗಮನಿಸಿ ಅವರಲ್ಲಿ ಆಗಿರುವ ಬದಲಾವಣೆ ಪತ್ತೆ ಹಚ್ಚಿ ಆಪ್ತ ಸಮಾಲೋಚನೆ ನಡೆಸಿ ತಿಳಿಹೇಳಬೇಕು. ಪ್ರತಿ ಮಾಹೆಯ ಪ್ರಕೃತಿದತ್ತವಾಗಿ ಹೆಣ್ಣು ಮಕ್ಕಳಲ್ಲಿ ಆಗುವ ಋತುಚಕ್ರದ ಬಗ್ಗೆ ಗಂಡು ಹೆಣ್ಣು ಮಕ್ಕಳಿಬ್ಬರಿಗೂ ತಿಳುವಳಿಕೆ ನೀಡಬೇಕು ಎಂದರಲ್ಲದೆ, ಋತುಚಕ್ರದ ಸಮಯದಲ್ಲಿ ಹೆಣ್ಣು ಮಕ್ಕಳು ವೈಯಕ್ತಿಕ ಸ್ವಚ್ಛತೆ ಬಗ್ಗೆ ಗಮನಹರಿಸಲು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು ಎಂದರು.

ಮಕ್ಕಳ ಆರೋಗ್ಯದ ಮೇಲೆ ನಿಗಾವಹಿಸಲು ತಪಾಸಣೆ ಮಾಡಿಸಲು ಕ್ರಮವಹಿಸಬೇಕು. ಜೊತೆಗೆ ಆರೋಗ್ಯದ ಸ್ಥಿತಿಗತಿ ಬಗ್ಗೆ ರೇಕಾರ್ಡ್ ನಿರ್ವಹಣೆ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಯಾವುದೇ ಸಮಸ್ಯೆಗೆ ಸಿಲುಕಿದಾಗ ಮಕ್ಕಳ ಸಹಾಯವಾಣಿ ಸಂಖ್ಯೆ 1098ಗೆ ಕರೆ ಮಾಡುವಂತೆ ಮಕ್ಕಳಲ್ಲಿ ಜಾಗೃತಿ ಮೂಡಿಸಿ ಮಾನಸಿಕವಾಗಿ ಸದೃಢಗೊಳಿಸಲು ತಿಳಿಸಿದರು.

ಮಕ್ಕಳ ಸುರಕ್ಷತೆಯನ್ನು ಉದಾಸೀನ ಮಾಡದೆ ಶಿಕ್ಷಕರು ಗಂಭೀರವಾಗಿ ಪರಿಗಣಿಸಿ ಹೆಚ್ಚಿನ ಕಾಳಜಿ ವಹಿಸಿ ಅವರಲ್ಲಿ ಆಗುವ ಬದಲಾವಣೆಗಳ ಬಗ್ಗೆ ಎಚ್ಚರವಹಿಸಬೇಕು. ಜಿಲ್ಲೆಯಲ್ಲಿರುವ ಎಲ್ಲಾ ಶಾಲೆಗಳ ವಾಹನ ಚಾಲಕರ ಪಟ್ಟಿ ತಯಾರಿಸಿ ಎಂದರಲ್ಲದೆ, ಅಜಾಗರೂಕತೆಯಿಂದ ವಾಹನ ಚಾಲನೆ ಮಾಡುವವರ ಬಗ್ಗೆ ನಿಗಾವಹಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ದೃಢಿಕರಿಸಬೇಕು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಅದನ್ನು ಪರಿಶೀಲಿಸಿದ ನಂತರ ಚಾಲಕರ ನೇಮ ಕಾತಿಗೆ ಅನುಮತಿ ನೀಡುವಂತೆ ನಿರ್ದೇಶನ ನೀಡಿದರು.

ಬಾಲ್ಯ ವಿವಾಹ, ಪೋಕ್ಸ್, ಬಾಲ ಗರ್ಭಿಣಿ, ಮಕ್ಕಳ ಸುರಕ್ಷತೆ ಕುರಿತು ಸಂಪನ್ಮೂಲ ವ್ಯಕ್ತಿಗಳ ಮೂಲಕ ಅರಿವು ಮೂಡಿಸಲು ತಾಲ್ಲೂಕುವಾರು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಶಾಲೆಗಳಲ್ಲಿ ಸಿ.ಸಿ.ಟಿ.ವಿ. ಶಾಲಾ ವಾಹನಗಳಿಗೆ ಜಿಪಿಎಸ್ ಕಡ್ಡಾಯವಾಗಿ ಅಳವಡಿಸಬೇಕು ಎಂದು ತಿಳಿಸಿದರು. ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬಲರಾಂ, ಜಿಲ್ಲಾ ಮಕ್ಕಳ ಸಂರಕ್ಷಣಾಧಿಕಾರಿ ದಿಲೀಪ್ ಹಾಗೂ ಮತ್ತಿತರರು ಸಭೆಯಲ್ಲಿ ಹಾಜರಿದ್ದರು.

ಕೋಗಿಲು ವಿವಾದ : ಪಾಕ್, ಕೇರಳ ಕ್ಯಾತೆ

» ಮೊದಲನೇ ಪುಟದಿಂದ

ವರನ್ನು ಸಂತ್ರಸ್ತರು ಎನ್ನುವುದಾದರೆ, ಉತ್ತರ ಕರ್ನಾಟಕ ಭಾಗದಲ್ಲಿ ಅದೆಷ್ಟೋ ನಿರಾಶ್ರಿತರು, ಅಲೆಮಾರಿ ಕೂಲಿ ಕಾರ್ಮಿಕ ವರ್ಗದವರು ಸೂರಿಲ್ಲದೆ ಹೆಣಗಾಡುತ್ತಿರುವುದು ಈ ಜಾಣ ಕುರುಡು ಕಾಂಗ್ರೆಸ್ ಸರ್ಕಾರಕ್ಕೆ ಕಾಣಿಸುತ್ತಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಕೋಗಿಲು ಬಡಾವಣೆಯಲ್ಲಿ ಸೂರು ಕಳೆದುಕೊಂಡ ಅರ್ಹರಿಗೆ ಬೈಯ್ಯಪ್ಪನ ಹಳ್ಳಿಯಲ್ಲಿ ಪರ್ಯಾಯ ಮನೆ ಹಂಚಿಕೆ ಮಾಡಲಾಗುವುದು ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು, ಪ್ರವಾಹ, ಅತಿವೃಷ್ಟಿ, ಅನಾವೃಷ್ಟಿ ಪರಿಹಾರಕ್ಕಾಗಿ ರಾಜ್ಯದಾದ್ಯಂತ ಹಲವು ವರ್ಷಗಳಿಂದ ಜನ ಕಾಯುತ್ತಿದ್ದಾರೆ. ಎರಡೇ ದಿನಕ್ಕೆ ಕೋಗಿಲು ಸಂತ್ರಸ್ತರಿಗೆ ಪರಿಹಾರ ಘೋಷಿಸಿರುವುದು ಕಾಂಗ್ರೆಸ್ ಸರ್ಕಾರದ ಓಲೈಕೆ ರಾಜಕಾರಣವಾಗಿದೆ ಎಂದು ಆರೋಪಿಸಿದ್ದಾರೆ.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕೂಡ ಕೋಗಿಲು ಬಡಾವಣೆಯ ಜನರಿಗೆ ಮನೆ ನೀಡುತ್ತಿರುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ರಾಜ್ಯ ಸರ್ಕಾರದ ಬಾರುಕೋಲು ಯಾರ ಬಳಿ ಇದೆ. ಕೆ.ಸಿ. ವೇಣುಗೋಪಾಲ್ ಅವರು ರಾಜ್ಯ ಸರ್ಕಾರದ ಅಧಿಕಾರದಲ್ಲಿ ಮೂಗು ತೂರಿ ಸುತ್ತಾರೆ. ಅವರದ್ದೇ ಸರ್ಕಾರದ ಪಿಣರಾಯಿ ವಿಜಯನ್ ಇಲ್ಲಿ ನಿರ್ದೇಶನ ನೀಡುತ್ತಾರೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರಿಗೆ ಸರ್ಕಾರ ನಡೆಸಲು ಹಕ್ಕು ಇದೆಯೇ ಎಂದು ಪ್ರಶ್ನಿಸಿದ್ದಾರೆ.

19 ಹೋರಾಟಗಾರರಿಗೆ ಜಾಮೀನು ಮಂಜೂರು

• ಪ್ರಜೋದಯ ವರದಿ

ಸಕಲೇಶಪುರ: ಅರ್ಜುನ ಆನೆಯ ಸ್ಮಾರಕ ನಿರ್ಮಾಣಕ್ಕಾಗಿ ಆಗ್ರಹಿಸಿದ್ದ 19 ಹೋರಾಟಗಾರರ ವಿರುದ್ಧ ದಾಖಲಾಗಿದ್ದ ಪ್ರಕರಣ ಸಂಬಂಧ ಇಲ್ಲಿನ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ. ಡಿ.30ರಂದು ವಿಚಾರಣೆಗೆ ಹಾಜರಾಗುವಂತೆ ಜೆಎಂಎಫ್‌ಸಿ ನ್ಯಾಯಾಲಯ ಸಮನ್ಸ್ ಜಾರಿ ಮಾಡಿತ್ತು. 2023ರ ಡಿ.4ರಂದು ಅರ್ಜುನ ಆನೆ ಯಸಳೂರು ವಲಯದ ದಬ್ಬಳಿಕಟ್ಟೆ ಬಳಿ ಕಾಡಾನೆ ಜೊತೆಗಿನ ಕಾದಾಟದಲ್ಲಿ ವೀರ ಮರಣವಪ್ಪಿತ್ತು.

ಸಮಾಧಿ ಸ್ಥಳದಲ್ಲೇ ಸ್ಮಾರಕ ನಿರ್ಮಿಸಬೇಕೆಂದು ಆ ವೇಳೆ ಸ್ಥಳೀಯರು ಹೋರಾಟ ಮಾಡಿದ್ದರು. ಸರಿಯಾಗಿ ಎರಡು ವರ್ಷಗಳ ಬಳಿಕ 19 ರೈತರು ಹಾಗು ಹೋರಾಟಗಾರರನ್ನು ಆರೋಪಿಗಳೆಂದು ಹೆಸರಿಸಿ ನ್ಯಾಯಾಲಯಕ್ಕೆ ಹಾಜರಾಗುವಂತೆ ನೋಟೀಸ್ ನೀಡಲಾಗಿತ್ತು. ಆದರೆ, ಘಟನೆ ನಡೆದ ಸಂದರ್ಭದಲ್ಲಿ ಯಾವ ನೋಟೀಸ್ ಅಥವಾ ಪೂರ್ವ ಮಾಹಿತಿ ನೀಡಿರಲಿಲ್ಲ. ಅಪರಾಧ ನಡೆದಿದೆ ಎನ್ನಲಾಗಿರುವ ಸಂದರ್ಭದಲ್ಲೇ ಕ್ರಮ ಕೈಗೊಳ್ಳದೆ, ಎರಡು ವರ್ಷ ಮೌನ ವಹಿಸಿ ಏಕಾಏಕಿ ಪ್ರಕರಣ ದಾಖಲಿಸಿರುವುದು ಅನ್ಯಾಯವೆಂದು ಹೋರಾಟಗಾರರು ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಪ್ರಕರಣದ ವಿಚಾರವಾಗಿ ಸದನದಲ್ಲೂ ಶಾಸಕ ಸಿಮೆಂಟ್ ಮಂಜು ಪ್ರಸ್ತಾಪಿಸಿ ದ್ದರು. ಪ್ರಕರಣ ರದ್ದುಗೊಳಿಸುವಂತೆ ಹೋರಾಟಗಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಈನಡುವೆ, ಸ್ಥಳೀಯ ನ್ಯಾಯಾಲಯದಿಂದ ಜಾಮೀನು ದೊರೆತಿದೆ.

ಅನಿಲ್ ನಿಧನ

• ಪ್ರಜೋದಯ ವರದಿ

ಹಾಸನ: ನಗರದ ಪ್ರಜ್ವಲ್ ಚಿಪ್ಸ್ ಅಂಗಡಿ ಮಾಲೀಕರಾದ ಅನಿಲ್ (61) ಅವರು ಅನಾರೋಗ್ಯದಿಂದ ಮಂಗಳ ವಾರ ಮಧ್ಯಾಹ್ನ ನಿಧನ ರಾದರು. ಸತ್ಯ ವಂಗಲ ಬಡಾವಣೆಯ ಲ್ಲಿರುವ ಅವರ ಮನೆಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಿದ್ದು, ಬುಧ ವಾರ ಅಂತ್ಯಕ್ರಿಯೆ ನಡೆಯಲಿದೆ.

ಚಿನ್ನಾಭರಣ ಕಳವು

• ಪ್ರಜೋದಯ ವರದಿ

ಹಾಸನ: ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಬೀಗ ಮುರಿದು ಒಳನುಗ್ಗಿರುವ ಕಳ್ಳರು 2.34 ಲಕ್ಷ ರೂ. ಬೆಲೆಯ ಚಿನ್ನಾಭರಣ ಕಳವು ಮಾಡಿರುವ ಘಟನೆ ಜಯ ನಗರದಲ್ಲಿ ನಡೆದಿದೆ.

ಸುಜಾತಾ ಅವರು ಸಂಬಂಧಿಕ ರೊಬ್ಬರ ಅಂತ್ಯಕ್ರಿಯೆಗೆ ಮನೆಗೆ ಬೀಗ ಹಾಕಿ ಕುಟುಂಬ ಸಮೇತ ಆರಕಲಗೂಡು ತಾಲ್ಲೂಕಿನ ಬೆಳವಾಡಿ ಗ್ರಾಮಕ್ಕೆ ಡಿ.27 ರಂದು ತೆರಳಿದ್ದರು. ಮಾರನೇ ದಿನ ವಾಪಾಸ್ ಬಂದು ನೋಡಿದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ವಾರ್ಡ್ ರೋಬ್‌ನ ಲಾಕರ್‌ನಲ್ಲಿಟ್ಟಿದ್ದ 8 ಗ್ರಾಂ ತೂಕದ 3 ಉಂಗುರ, 13 ಗ್ರಾಂ ತೂಕದ ಗಣಪತಿ ಪೆಂಡೆಂಟ್, 6 ಗ್ರಾಂ ತೂಕದ 2 ಜೊತೆ ಚಿನ್ನದ ಓಲೆ, 10 ಗ್ರಾಂ ತೂಕದ 1 ಚಿನ್ನದ ಬಳೆ, 2 ಗ್ರಾಂ ತೂಕದ ಚಿನ್ನದ ಲಕ್ಷ್ಮಿ ಪೆಂಡೆಂಟ್, 1 ಗ್ರಾಂ ತೂಕದ ಚಿನ್ನದ ಕಾಸು, 1 ಗ್ರಾಂ ತೂಕದ 8 ಚಿಕ್ಕ ಚಿನ್ನದ ಗುಂಡು, 300 ಗ್ರಾಂ ತೂಕದ 4 ಜೊತೆ ಬೆಳ್ಳಿ ಕಾಲು ಚೈನು, 50 ಗ್ರಾಂ ತೂಕದ 2 ಜೊತೆ ಬೆಳ್ಳಿ ದೀಪ ಹಾಗು 5000 ರೂ. ನಗದು ಕಳವು ಮಾಡಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋರೆಗಾಂವ್ ವಿಜಯೋತ್ಸವ

ಅರಕಲಗೂಡು: ಪಟ್ಟಣದ ಮುಖ್ಯ ರಸ್ತೆಯಲ್ಲಿ 208ನೇ ವರ್ಷದ ಭೀಮ ಕೋರೆಗಾಂವ್ ವಿಜಯೋತ್ಸವವನ್ನು ಜ.1ರಂದು ಹಮ್ಮಿಕೊಂಡಿರುವುದಾಗಿ ಸಮಿತಿ ಅಧ್ಯಕ್ಷ ಎ.ಬಿ.ಚಂದ್ರ ಅವರು ತಿಳಿಸಿದರು.

ಭಾರತೀಯ ಬೌದ್ಧ ಮಹಾ ಸಭಾ ಅಧ್ಯಕ್ಷ ಎಸ್.ಸಿದ್ದರಾಜು, ಹಾಸನ ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ ಎಂ.ಬಿ.ಚನ್ನಕೇಶವ, ಉಪ ತಹಶೀಲ್ದಾರ್ ಸಿ.ಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಿದ್ದನಾಕ್ ಅವರ ಭಾವ ಚಿತ್ರ ದೊಂದಿಗೆ ಬೃಹತ್ ಮೆರವಣಿಗೆ ನಡೆಯಲಿದೆ ಎಂದರು. ಮುಖಂಡರಾದ ಮನೋಜ್, ಕಾರ್ತಿಕ್, ಸುಮಂತ್, ಹೇಮಂತ್ ಇದ್ದರು.

ಸಂತೆಗೆ ಬಂದಿದ್ದ ವಾಹನಗಳಲ್ಲಿ ಕಳ್ಳತನ

• ಪ್ರಜೋದಯ ವರದಿ

ಅರೇಹಳ್ಳಿ: ಸಾವಿರಾರು ಜನರು ಸೇರುವ ವಾರದ ಸಂತೆಯಲ್ಲಿ ಕಳ್ಳರ ಗುಂಪೊಂದು ಸಂಚು ನಡೆಸಿ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿದ್ದ 15 ವಾಹನಗಳ ಡೋರ್, ಗ್ಲಾಸ್‌ಗಳನ್ನು ಧ್ವಂಸಗೊಳಿಸಿ, ವಾಹನದೊಳಗಿದ್ದ ಹಣ ಹಾಗು ಬೆಲೆಬಾಳುವ ವಸ್ತುಗಳನ್ನು ದೋಚಿ ಪರಾರಿಯಾಗಿದ್ದಾರೆ.

ಅರೇಹಳ್ಳಿ ಪಟ್ಟಣದಲ್ಲಿ ಪ್ರತಿ ಸೋಮವಾರ ನಡೆಯುವ ವಾರದ ಸಂತೆಗಾಗಿ ತಾಲ್ಲೂಕಿನ ವ್ಯಾಪಾರಸ್ಥರು ಅಲ್ಲದೆ ವಿವಿಧ ತಾಲ್ಲೂಕಿನ ವ್ಯಾಪಾರಿಗಳು ಆಗಮಿಸುತ್ತಾರೆ. ಈ ವೇಳೆ ಸಂತೆ ಯಲ್ಲಿ ವ್ಯಾಪಾರ ಮಾಡಲು ಬಂದಿದ್ದ ಬೇರೆ ಊರಿನ ವ್ಯಾಪಾರಸ್ಥರು ಪ್ರತಿ ವಾರದಂತೆ ತಮ್ಮ ಟಾಟಾ ಏಸ್, ಮಹೀಂದ್ರ ಪಿಕಪ್ ಸೇರಿ 15 ಗೂಡ್ಸ್ ವಾಹನಗಳನ್ನು ಸಂತೆ ಸಮೀಪ ಖಾಲಿ ಜಾಗದಲ್ಲಿ ಎಂದಿನಂತೆ ಪಾರ್ಕಿಂಗ್ ಮಾಡಿ ವ್ಯಾಪಾರ ವಹಿವಾಟು ನಡೆಸುತ್ತಿದ್ದರು. ವ್ಯಾಪಾರ ವಾಹಿವಾಟು ಮುಗಿಸಿ ವಾಹನದ ಸಮೀಪ ಬಂದು ನೋಡಿದಾಗ ನಿಲ್ಲಿಸಿದ್ದ ವಾಹನಗಳ ಡೋರ್, ಗ್ಲಾಸ್ ಧ್ವಂಸ ಮಾಡಿ ಡ್ಯಾಶ್ ಬೋರ್ಡ್‌ನ ಒಳಗಿದ್ದ ನಗದು, ಬ್ಯಾಟರಿ ಸೇರಿ ಇನ್ನಿತರೆ ವಸ್ತುಗಳನ್ನು ದೋಚಿ ಪರಾರಿಯಾಗಿದ್ದಾರೆ. ಈ ಸಂಬಂಧ ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಲ ದಿನಗಳ ಹಿಂದಷ್ಟೇ ರಾತ್ರಿ ಸಮಯದಲ್ಲಿ ಕಾಫಿ ಕಳ್ಳತನಕ್ಕೆ ಅಡ್ಡ ಬಂದ ಬೆಳೆಗಾರನ ಮೇಲೆ ಹಲ್ಲೆ ನಡೆಸಿ ಕಾಫಿ ದೋಚಿ ತಲೆ ಮರೆಸಿಕೊಂಡಿದ್ದ ಖದೀಮರನ್ನು ಪೊಲೀಸರು ಪತ್ತೆ ಹಚ್ಚಿ ಜೈಲಿ ಗಟ್ಟಿರುವ ಘಟನೆ ಮಾಸುವ ಮುನ್ನವೇ ವಾಹನಗಳಲ್ಲಿ ಕಳ್ಳತನ ನಡೆದಿರುವುದು ವ್ಯಾಪಾರಿಗಳು, ಸ್ಥಳೀಯರನ್ನು ಕಂಗೆಡಿಸಿದೆ.

ಸ್ವರ್ಗದ ಬಾಗಿಲು ಮೂಲಕ ಪ್ರವೇಶಿಸಿ ದೇವರ ದರ್ಶನ ಪಡೆದ ಸಾವಿರಾರು ಭಕ್ತರು

ಭಕ್ತಿ ಪೂರ್ವಕವಾಗಿ ನೆರವೇರಿದ ವೈಕುಂಠ ಏಕಾದಶಿ

• ಪ್ರಜೋದಯ ವರದಿ

ಹಾಸನ: ಜಿಲ್ಲಾದ್ಯಂತ ಸಾವಿರಾರು ಭಕ್ತರು ವೈಕುಂಠ ಏಕಾದಶಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಿ, ವಿಶೇಷ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದರು.

ಜಿಲ್ಲೆಯ ಶ್ರೀ ವಿಷ್ಣು ಹಾಗು ಶ್ರೀ ಲಕ್ಷ್ಮೀ ವೆಂಕಟರಮಣನ ದೇವಾಲಯಗಳಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆ ಪುರಸ್ಕಾರಗಳು, ಅಭಿಷೇಕ, ಅಲಂಕಾರ, ಅರ್ಚನೆ ಮತ್ತು ಮಹಾ ಮಂಗಳಾರತಿ ಶ್ರದ್ಧಾಭಕ್ತಿಯಿಂದ ನಡೆಯಿತು. ಅನೇಕ ದೇವಾಲಯಗಳಲ್ಲಿ ಸ್ವರ್ಗದ ಬಾಗಿಲು ವ್ಯವಸ್ಥೆ ಮಾಡಲಾಗಿದ್ದು, ಭಕ್ತರು ಸರದಿ ಸಾಲಿನಲ್ಲಿ ನಿಂತು ಶಿಸ್ತಿನಿಂದ ದೇವರ ದರ್ಶನ ಪಡೆದು ಪುನೀತರಾದರು. ಬೆಳಿಗ್ಗಿನಿಂದಲೇ ಆರಂಭವಾದ ಪೂಜ್ಯ ಕೈಂಕರಗಳು ಮಧ್ಯಾಹ್ನ ಮತ್ತು ಸಂಜೆ ವರೆಗೂ ನಿರಂತರವಾಗಿ ನಡೆಯಿತು. ಕುಟುಂಬ ಸಮೇತರಾಗಿ ಆಗಮಿಸಿದ ಭಕ್ತರು ದೇ